ಅರ್ಕಾವತಿ ನದಿಗೆ ಬಿಟ್ಟು ನಮ್ಮ ಕಡೆಗೆ ಆ ನೀರನ್ನು ಕೊಡುವ ರೀತಿಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಆ ಪ್ರದೇಶಗಳಲ್ಲಿ ಜನಗಳಿಗೆ ಮತ್ತು ದನಕರುಗಳಿಗೂ ಕೂಡ ಕುಡಿಯುವುದಕ್ಕೆ ನೀರು ಇಲ್ಲದೇ ಬಹಳ ತೊಂದರೆಯಾಗಿಬಿಟ್ಟಿದೆ. ಆದ ದರಿಂದ ಒಂದೆರಡು ದಿವಸಗಳಲ್ಲಿ ನಮ್ಮ ಕಡೆಗೆ ನೀರನ್ನು ತಿಪ್ಪಗೊಂಡನಹಳ್ಳಿಯಿಂದ ಬಿಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್ ಬಿ. ನಗರಾಳ್.—ಅದನ್ನು ಪರಿಶೀಲನೆಮಾಡಿ ಸರ್‌ಪ್ಲಸ್ ವಾಟರ್ ಇದ್ದರೆ ನೀರು ಬಿಡಿಸುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈಗ ಬೆಂಗಳೂರಿಗೆ ಕಾವೇರಿ ನೀರು ಬರುತ್ತಾವೆ, ಆದ್ದರಿಂದ ಮಾನ್ಯ ಮಂತ್ರಿಗಳು ಈ ದಿವಸದಿಂದಲೇ ರಾಮನಗರದ ಕಡೆಗೆ ನೀರನ್ನು ಬಿಡಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

PRIVATE MEMBER'S RESOLUTIONS

re: Providing Rs. 10 Crores for Minor Irrigation Work in Budget for 1975-76.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ನಾನು ಸಣ್ಣ ನೀರಾವರಿ ಯೋಜನೆಗೆ ಹಣವನ್ನು ನಿರ್ಧಿಷ್ಟವಾದ ಪ್ರಮಾಣದಲ್ಲಿ ಒದಗಿಸಿಕೊಡಬೇಕು ಎನ್ನುವ ವಿಷಯದಲ್ಲಿ ಆ ನಿರ್ಣಯದ ಬಗ್ಗೆ ನೆನ್ನೆ ಹೇಳುತ್ತಾ ಇದ್ದೆ. ಇವೊತ್ತು ನಮ್ಮ ರಾಷ್ಟ್ರದಲ್ಲಿ ವ್ಯವಸಾಯಗಾರರು ಬಹಳ ಅಸಂಖ್ಯಾತ ಸಂಖ್ಯೆಯಲ್ಲಿ ಇದ್ದರೂ ಕೂಡ ಅವನು ತಮಗೆ ಅಗತ್ಯವಾದ, ತನ್ನ ಹೊಟ್ಟೆ ಪೋಷಣೆಗಾದರೂ ಬೇಕಾದಷ್ಟು ಆಹಾರ ಪದಾರ್ಥಗಳನ್ನು ಬೆಳೆಯಲಿಕ್ಕೆ ಆಗದೇ ಇರುವ ಪರಿಸ್ಥಿತಿಯಲ್ಲಿ ಇದ್ದಾರೆ. ಇವೊತ್ತಿನ ದಿವಸ ವ್ಯವಸಾಯಗಾರರಿಗೆ ದೊಡ್ಡ ಸಂಪತ್ತನ್ನು, ಸವಲತ್ತನ್ನು ಒದಗಿಸಿಕೊಡುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕಿಂಥ ಬದಲಾಗಿ ಕನಿಷ್ಟ ಪ್ರಮಾಣದ ಎರಡು ಹೊತ್ತು ಊಟವನ್ನು ಸದಾ ಕಾಲವು ಅವನಿಗೆ ಸಿಕ್ಕುವ ರೀತಿಯಲ್ಲಿ ಅವನಿಗೆ ಯೋಜನೆ ಮಾಡಬೇಕಾದ್ದು ಇದೆ. ಅಲ್ಲದೇ ಕೇವಲ ಹೆಸರಿಗೆ ಮಾತ್ರ ವ್ಯವಸಾಯಗಾರರ ರಾಷ್ಟ್ರ ಎಂದು ಹೇಳುವುದು, ಇಲ್ಲಿ ನೋಡಿದರೆ ಆಹಾರದ ಕೊರತೆ ಹೆಚ್ಚಾಗಿ ನರಳುತ್ತಾ ಇರುವುದು ನಮ್ಮ ಕಣ್ಣ ಮುಂದೆ ಇದೆ. ಇವೊತ್ತಿನ ದಿವಸ ಸರ್ಕಾರದವರು ಕೊಟ್ಟಿರತಕ್ಕ ವರದಿಯನ್ನು ನೋಡಿದರೆ ಹೆಚ್ಚಿನ ಜನ ಗ್ರಾಮಾಂತರ ಪ್ರದೇಶದಲ್ಲಿ ಅಂದರೆ ಶೇಕಡಾ ೭೫ ಮಂದಿಗಿಂತ ಹೆಚ್ಚು ಜನರು ಬಡತನ ರೇಖೆಯಲ್ಲಿ ಇದ್ದಾರೆ. ಅವರಿಗೆ ಒಂದು ಹೊತ್ತು ಊಟ ಇದ್ದರೆ, ಇನ್ನೊಂದು ಹೊತ್ತು ಊಟ ಇರುವುದಿಲ್ಲ. ಈ ದಾರುಣ ಪರಿಸ್ಥಿತಿಯನ್ನು ನಾವು ಈ ವ್ಯವಸಾಯಗಾರರ ಕ್ಷೇತ್ರದಲ್ಲಿ ಕಾಣುತ್ತಿದ್ದೇನೆ. ಆದ್ದರಿಂದ ಒಂದು ಸಮಗ್ರವಾದ ಯೋಜನೆಯನ್ನು ಮಾಡಿ, ವ್ಯವಸಾಯಗಾರನ ಭೂಮಿಗೆ ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಎಲ್ಲೆಲ್ಲಿ ಸಾಧ್ಯವೋ, ಎಲ್ಲೆಲ್ಲಿ ನೀರಿನ ಮೂಲ ಇದೆಯೋ ಅಂಥ ಕಡೆಗಳಲ್ಲಿ ನೀರನ್ನು ಒದಗಿಸಿಕೊಡತಕ್ಕಂಥ ಪ್ರಯತ್ನ ಮಾಡಬೇಕಾಗಿದೆ. ಈಗ ಹೆಚ್ಚಾಗಿ ಸಣ್ಣ ನೀರಾವರಿ ಪ್ರಶ್ನೆ ನಮ್ಮ ಮುಂದೆ ಇರುವುದು. ಸಣ್ಣ ನೀರಾವರಿ ಯೋಜನೆಯ ಕೆಲಸ ಮಾಡಬೇಕಾದುದು ಇಡೀ ಕರ್ನಾಟಕ ರಾಜ್ಯದ ದೃಷ್ಟಿಯಿಂದ ಪ್ರಾಮುಖ್ಯವಾದ ಸರ್ಕಾರದ ಕರ್ತವ್ಯ ಮತ್ತು ವ್ಯವಸಾಯಗಾರರ ದೃಷ್ಟಿಯಿಂದ ಮಾಡಲೇ ಬೇಕಾದ ಜವಾಬ್ದಾರಿ ಎನ್ನತಕ್ಕಂಥದ್ದನ್ನು ಮೊದಲು ನಾವು ಕಲ್ಪನೆಗೆ ತೆಗೆದುಕೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಪ್ರತಿಯೊಂದು ಮನೆಗೂ, ಕುಟುಂಬಕ್ಕೂ ನೀರು ಕೊಡತಕ್ಕ ಸಣ್ಣ ನೀರಾವರಿ ಯೋಜನೆ ಪೂರೈಸಲು ಒಬ್ಬ ಮಂತ್ರಿಗೆ ಅವರ ಕ್ಯಾಬಿನೆಟ್‌ನಲ್ಲಿ ಸ್ಥಾನವೇ ಇಲ್ಲದೇ ಹೋದಾಗ ಅವರು ಹೇಗೆ ಈ ಕೆಲಸ ಮಾಡುತ್ತಾರೆ ಎನ್ನತಕ್ಕಂಥದ್ದನ್ನು ಬಹಳ ವಿಷಾದದಿಂದ ಮನಗಾಣಬೇಕಾಗಿದೆ. ಆದುದರಿಂದ ಈ ಸಣ್ಣ ನೀರಾವರಿ ಮಂತ್ರಿಗೆ ಕ್ಯಾಬಿನೆಟ್‌ನಲ್ಲಿ ಒಂದು ಸ್ಥಾನ ಸಿಗಬೇಕೆಂದು ನಿನ್ನೆ ಹೇಳಿದೆ. ಈಗ ಸಭೆಯಲ್ಲಿ ಮುಖ್ಯಮಂತ್ರಿಗಳಿರುವುದರಿಂದ ಮತ್ತೆ ಆ ಮಾತನ್ನು ಹೇಳುತ್ತೇನೆ. ಕರ್ನಾಟಕ ವ್ಯವಸಾಯಗಾರರ ಕ್ಷೇತ್ರದಲ್ಲಿ ಭೂ ಹಿಡುವಳಿಯ ವಿಸ್ತೀರ್ಣ ಮತ್ತು ನೀರಾವರಿ ಪ್ರದೇಶದ ಅಂಕಿ ಅಂಶಗಳನ್ನು ನೋಡಿದಾಗ ನಮಗೆ ಬಹಳ ನಿರಾಶೆಯಾಗುತ್ತದೆ. ಕರ್ನಾಟಕದಲ್ಲಿ ಒಟ್ಟು ಭೂಮಿ ಎಷ್ಟಿದೆ ಎಂದರೆ ೩೫,೫೧,೦೦೦ ಹೆಕ್ಟೇರ್ ಭೂಮಿ ಹಿಡುವಳಿ ಇದೆ. ಸರ್ಕಾರವೇ ಕೊಟ್ಟಿರತಕ್ಕ ಅಂಕಿಅಂಶಗಳನ್ನು ಅವಲೋಕನ ಮಾಡಿದರೆ ವಿವರ ಹೀಗಿದೆ.—

HOLDINGS

Bangalore District	2.41	0.30
Belgaum District	2.98	0.14
Bellary ,,	1.28	0.13
Bidar ,,	0.88	0.01
Bijapur ,,	2.47	0.05
Chikmagalur ,,	0.92	0.13
Chitaldrug ,,	1.77	0.23
Coorg ,,	0.37	0.03
Dharwar ,,	2.70	0.10
Gulbarga ,,	2.13	0.04
Hassan ,,	1.67	0.16
Kolar ,,	2.09	0.31
Mandya ,,	2.16	0.56
Mysore ,,	2.72	0.44
North Kanara ,,	1.06	0.03
Raichur ,,	2.29	0.23
South Kanara ,,	1.03	0.01
Shimoga ,,	1.47	0.52
Tumkur ,,	2.85	0.36

ಇಂದು ೧೯ ಜಿಲ್ಲೆಯ ಪರಿಸ್ಥಿತಿಯನ್ನು ನೋಡಿದರೆ ನಮಗೆ ಒಟ್ಟು ೩೫,೫೧,೦೦೦ ಹೆಕ್ಟೇರ್ ಹಿಡುವಳಿ ಇದ್ದರೆ ನೀರಾವರಿ ಕ್ಷೇತ್ರಕ್ಕೆ ಒಳಪಟ್ಟಿರತಕ್ಕ ಪ್ರದೇಶವನ್ನು ಲೆಕ್ಕ ಹಾಕಿದರೆ ಅದರಲ್ಲಿ ಕೇವಲ ೮೪.೨೮ ಲಕ್ಷ ಹೆಕ್ಟೇರ್ ಪ್ರಮಾಣದ ನೀರಾವರಿ ಪ್ರದೇಶ ಇದೆ. ಆದರೆ ನಾವು ಬಹಳ ಹಿಂದಿದ್ದೇವೆ. ಹಾಗೆ ಯಾವ ಯಾವ ಮೂಲಗಳಿಂದ ಎಷ್ಟು ಪ್ರದೇಶ ಒಳಪಟ್ಟಿದೆ ಎನ್ನುವುದನ್ನು ಅವಲೋಕನ ಮಾಡಿ ನೋಡಿದರೆ ತೀರ ಭಯಾನಕವಾದ ಪರಿಸ್ಥಿತಿಯನ್ನು ತಂದುಕೊಡುತ್ತದೆ ಇವತ್ತು ವಿವಿಧ ಮೂಲಗಳಿಂದ ನೀರಾವರಿ ಕ್ಷೇತ್ರದ ಬಗ್ಗೆ ಕರ್ನಾಟಕದ ಪ್ರಗತಿ ಸೂಚಿಕೆಯಲ್ಲಿ ವಿವರ ಕೊಟ್ಟಿದ್ದಾರೆ ಇದನ್ನು ನೋಡಿದರೆ ಸಣ್ಣ ನೀರಾವರಿ ಕ್ಷೇತ್ರದಲ್ಲಿ ೧೯೪೯—೫೦ ರಲ್ಲಿ ಕೆರೆಗಳಿಂದ ೩,೮೭,೫೪೧ ಹೆಕ್ಟೇರ್ ನೀರಾವರಿ ಆಗಿದ್ದರೆ ಇವತ್ತು ೭೦—೭ ರಲ್ಲಿ ಇದು ಸುಮಾರು ೩.೬೪,೮೮೪ ಹೆಕ್ಟೇರುಗಳಿಗೆ ಬಂದಿದೆ ಬಾವಿಗಳಿಂದ ೧೯೪೯—೫೦ ರಲ್ಲಿ ೧,೪೯,೦೯೫ ಹೆಕ್ಟೇರ್ ಇದ್ದದ್ದು ೧೯೭೦—೭೧ರಲ್ಲಿ [illegible] ಹೆಕ್ಟೇರ್ ಆಗಿದೆ. ಇನ್ನೂ ಇತರ ಮೂಲಗಳಿಂದ ೧೯೪೯—೫೦ರಲ್ಲಿ ೭೮,೫೮೯ ಹೆಕ್ಟೇರ್ ಇದ್ದರೆ ೧೯೭೦-೭೧ರಲ್ಲಿ ೬೦,೪೪೨ ಹೆಕ್ಟೇರ್‌ನಷ್ಟು ಪ್ರಮಾಣವಾಗಿದೆ ಕೆರೆಗಳು ಬಾವಿಗಳು ಇವುಗಳಿಂದ ಆಗತಕ್ಕ ಒಟ್ಟು ಹಿಡುವಳಿ ವಿಸ್ತೀರ್ಣ ಲೆಕ್ಕ ಹಾಕಿದರೆ ನೀರಾವರಿ ಆಗಿರತಕ್ಕದ್ದು ತೀರಾ ಕಡಿಮೆ ಪ್ರಮಾಣದ್ದಾಗಿದೆ. ಎನ್ನುವುದನ್ನು ನಾವು ಗಮನಿಸಬೇಕು. ಹಾಗೆಯೇ ಅಧ್ಯಕ್ಷರೆ, ೫ನೇ ಪಂಚವಾರ್ಷಿಕ ಯೋಜನೆಯ ಕರಡನ್ನು ಸಿದ್ಧಪಡಿಸತಕ್ಕ ಕಾಲದಲ್ಲಿ ಒಂದು ಅಂಶವನ್ನು ಅಲ್ಲಿ ಕಾಣಿಸಿದ್ದಾರೆ. ಮೈನರ್ ಇರಿಗೇಶನ್ ಚಾಪ್ಟರ್‌ನಲ್ಲಿ ಈ ಮಾತನ್ನು ಹೇಳುತ್ತಾರೆ

> "It has been roughly estimated that the total irrigation potential available in the State through minor irrigation works is of the order of 40 lakhs acres or 16.2 lakh hectares. A massive investment in the post plan period on construction of new tanks, pick-ups, lift irrigation works, etc; has added a sizeable area to the area under irrigation in the State. There are 35,000 tanks in the State and many of them are getting silted up.,

ಆದುದರಿಂದ ಇವತ್ತು ಪರಿಸ್ಥಿತಿ ಏನು ಕಾಣುತ್ತದೆ ಎಂದರೆ ನಮ್ಮ ರಾಜ್ಯದಲ್ಲಿ ಕೇವಲ ೩೫,೦೦೦ ಕೆರೆಗಳಿವೆ and many of them are getting silted up. ಅವು ಹೂಳು ತುಂಬಿಕೊಂಡಿವೆ ಇವತ್ತು ಸಣ್ಣ ನೀರಾವರಿ ಪ್ರದೇಶವನ್ನೂ ೪೦ ಲಕ್ಷ ಎಕರೆಗೆ ಏರಿಸಬೇಕಾದ ಕಡೆ ೪ ಲಕ್ಷ ಹೆಕ್ಟೇರಿಗೆ ಮೀರಿ ಏರಿಸಲಿಕ್ಕೆ ಆಗಲಿಲ್ಲ ೩೫,೦೦೦ ಕೆರೆಗಳು ಇವತ್ತು ಕಟ್ಟಿತತಕ್ಕ ಕೆರೆಗಳು ಅಲ್ಲ, ಬಹಳಷ್ಟು ಕೆರೆಗಳು

ನೂರಾರು ವರ್ಷಗಳಿಂದ ಇರತಕ್ಕ ಕೆರೆಗಳು. ಕಳೆದ ೨೫ ವರ್ಷಗಳಿಂದೀಚೆಗೆ ಕಟ್ಟಿಸಿದ ಕೆರೆಗಳು ಇದರಲ್ಲಿ ಶೇಕಡಾ ಹತ್ತರಷ್ಟು ಇರಬಹುದು ಉಳಿದ ಎಲ್ಲಾ ಕೆರೆಗಳು ನೂರಾರು ವರ್ಷಗಳಿಂದ ಇವೆ. ನಾವು ಹೊಸ ಕೆರೆ ಕಟ್ಟುವುದು ಇರಲಿ ಇರತಕ್ಕಂಥ ಕೆರೆಗಳನ್ನು ಜೋಪಾನಮಾಡಬೇಕಾದ ಅಗತ್ಯ ನಮ್ಮ ಮುಂದಿದೆ. ನಮ್ಮ ಮಲೆನಾಡಿನ ಕೆರೆಗಳಲ್ಲಿ ಹೂಳು ತುಂಬಿ ಹೋಗಿದೆ ಅನೇಕ ಕೆರೆಗಳು ಶಿವಪ್ಪನಾಯಕನ ಕಾಲದಲ್ಲಿ ಕಟ್ಟಿಸಿದವು. ಈ ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆದು ನೀರು ನಿಲ್ಲುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾವು ಇಲ್ಲಿ ಅನೇಕ ಸಲ ಹೇಳಿದ್ದೇವೆ ನಮ್ಮ ಸಣ್ಣ ನೀರಾವರಿ ಮಂತ್ರಿಗಳು ಆ ಭಾಗಕ್ಕೆ ಒಂದು ಸಲ ಬರುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಯಾವಾಗ ಬರುತ್ತಾರೋ ಗೊತ್ತಿಲ್ಲ. ನಮ್ಮ ಮಲೆನಾಡಿನ ಎಲ್ಲ ಸದಸ್ಯರೂ ಸೇರಿಕೊಂಡು ಅವರನ್ನು ಒಂದು ಸಲ ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿ ಹೂಳು ತೆಗೆಸುವ ಅಗತ್ಯ ಇದೆಯೋ ಅಥವಾ ಇಲ್ಲವೇ ಎಂಬುದನ್ನು ಮನವರಿಕೆ ಮಾಡಿಕೊಡಬೇಕಾಗಿದೆ. ಈ ವಿಚಾರವನ್ನು ನಾವು ಹೇಳುವುದಕ್ಕ ಮೊದಲೇ ಸರ್ಕಾರಕ್ಕೆ ಅ ಮನವರಿಕೆಯಾಗಿದೆ. ಹೂಳು ತೆಗೆಸುವುದು ಅಗತ್ಯವಿದೆ ಎಂಬುದು ಸರ್ಕಾರಕ್ಕೂ ಸಹ ಮನವರಿಕೆಯಾಗಿದೆ. ಆ ಬಗ್ಗೆ ಒಂದು ದೊಡ್ಡ ಪ್ರಮಾಣದ ಕಾರ್ಯಕ್ರಮವನ್ನು ರೂಪಿಸಬೇಕಾದ ಅಗತ್ಯವಿದೆ. ಈ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ೫ನೇ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ ಪ್ರಸ್ತಾಪ ಮಾಡಿರುವ ಅಂಶಗಳನ್ನು ನೋಡಿದರೆ ಬಾಯಲ್ಲಿ ನೀರು ಬರುತ್ತದೆ, ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ವರ್ಗದಿಂದ ಬಿರಿಯಾನಿ ಇಳಿಸುತ್ತಾರೆಂದು ನಾವು ತಿಳಿದುಕೊಳ್ಳಬಹುದು ಅಷ್ಟರ ಮಟ್ಟಿಗೆ ಇದರಲ್ಲಿ ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—೫ನೇ ಪಂಚವಾರ್ಷಿಕ ಯೋಜನೆಯ ಕರಡು ಡಿ.ಪಿ. ಧರ್ ಅವರ ಜೊತೆಯಲ್ಲಿ ರಷ್ಯಾಕ್ಕೆ ಹೋಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಅದರಲ್ಲಿ ಹೇಳಿರತಕ್ಕಂಥ ಮಾತಿನಿಂದ ಸಣ್ಣ ನೀರಾವರಿ ಬಗ್ಗೆ ಒಳ್ಳೆಯ ಕೆಲಸವನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ ಆದರೆ ಇಲ್ಲಿಯವರೆಗೆ ಆ ಬಗ್ಗೆ ಯಾವ ಕೆಲಸವನ್ನೂ ಮಾಡಿರುವುದು ಕಾಣುತ್ತಿಲ್ಲ, ಆರಂಭ ಶೂರತ್ವ ಎಂದು ಏನು ಹೇಳುತ್ತಾರೆ, ಅದರಂತೆ ಇಲ್ಲಿ ಹೇಳಿದ್ದಾರೆಯೋ ಹೊರತು, ಯಾವ ಕೆಲಸವನ್ನೂ ಕಳೆದ ೨ ವರ್ಷಗಳಿಂದ ಮಾಡಲಿಲ್ಲ. ೫ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗಿ ಎರಡು ವರ್ಷಗಳಾದರೂ ಆ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ, ಆ ಕರಡಿನಲ್ಲಿ ಏನು ಹೇಳಿದ್ದಾರೆಂದರೆ :

"After collection ef field data under careful supervision, a preliminary report of the projects will have to be made. In this process it is also necessary to have a careful look at all the existing tanks where the problem of siltation is progressively reducing the effective area under irrigation. Various measures such as desilting, raising of bund or conversion into percolation tank or soil conservation of foreshore areas, etc will have to be considered. Restoration of these works is also equally important in order to secure proper distribution of these minor irrigation works A talukawise analysis of the present irrigated area will also be made so that regional imbalances in irrigation an also be rectified to the extent there is scope for taking up new works. It will be necessary to have a properly staffed investigation circle for the entire State."

ಎನ್ನುವ ಮಾತನ್ನು ಹೇಳಿದ್ದಾರೆ. ಸಣ್ಣ ನೀರಾವರಿ ಯೋಜನೆಯ ಬಗ್ಗೆ ಒಂದು ಕರಡನ್ನು ರೂಪಿಸತಕ್ಕಂಥ ಕಾಲದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಪ್ರತ್ಯೇಕವಾಗಿ ಸರ್ವೆ ನಡೆಸಿ ಅದರ ಒಂದು ಆಧಾರದ ಮೇಲೆ ಕಾರ್ಯಕ್ರಮ ಕೈಕೊಳ್ಳಬೇಕಾಗಿತ್ತು ಎಷ್ಟು ಕೆರೆಗಳಲ್ಲ ಹೂಳು ತುಂಬಿದೆ, ಎಷ್ಟು ಟ್ಯಾಂಕ್‌ಗಳಲ್ಲಿ ನೀರು ಬೇರೆ ರೂಪದಲ್ಲಿ ಹಾಳಾಗುತ್ತಿದೆ, ಆ ರೀತಿ ಏನಾದರೂ ಹಾಳಾಗುತ್ತಿದ್ದರೆ ಬೇರೆ ರೂಪದಲ್ಲಿ ಆ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಒಂದು ಮಾಸ್ಟರ್ ಪ್ಲಾನನ್ನು ತಯಾರುಮಾಡಬೇಕಾಗಿತ್ತು ಈ ಒಂದು ಯೋಚನೆ ಸರ್ಕಾರಕ್ಕೆ ಇರಬೇಕಾಗಿತ್ತು ಆದರೆ ಈ ಯಾವ ಕೆಲಸವನ್ನೂ ಸಹ ೫ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗಿ ೨ ವರ್ಷವಾದರೂ ಸಹ ಸರ್ಕಾರದವರು ಮಾಡದಿರುವುದನ್ನು ನಾವು

ನೋಡಬಹುದಾಗಿದೆ ಒಂದು ಪ ತಾಲ್ಲೂಕಿನಲ್ಲಿಯೂ ಯಾವುದೇ ಈ ಕೆಲಸಗಳನ್ನು ಮಾಡದಿರುವುದರಿಂದ ಈ ಸಣ್ಣ ನೀರಾವರಿ ಯೋಜನೆಯ ಬಗ್ಗೆ ಇವರ ಕಲ್ಪನೆಯಾದರೂ ಏನು ಇವರ ಶ್ರದ್ಧೆಯಾದರೂ ಏನು, ಇವರ ಪ್ರಾಮಾಣಿಕತನವಾದರೂ ಏನು ಎಂದು ಪ್ರಶ್ನೆ ಮಾಡಬೇಕಾಗಿದೆ ಈ ಮೊದಲು ನಾನು ತಾಲ್ಲೂಕ್ ಬೋರ್ಡಿನ ಅಧ್ಯಕ್ಷನಾಗಿದ್ದೆ ಈಗ ಶಾಸಕನಾಗಿದ್ದೇನೆ ಜಿಲ್ಲಾಭಿವೃದ್ಧಿ ಸಮಿತಿಯಲ್ಲಿ ಮತ್ತು ಇನ್ನೂ ಅನೇಕ ಕಡೆಗಳಲ್ಲಿ ನಾನು ಈ ವಿಚಾರವಾಗಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇನೆ ಪ್ರತಿ ತಾಲ್ಲೂಕ್‌ನಲ್ಲಿ ದೀರ್ಘವಾಗಿ ಮತ್ತು ವ್ಯಾಪಕವಾಗಿ ಸರ್ವೆ ಮಾಡಿಸಿ, ಹೂಳು ತೆಗೆಸಿದರೆ ಎಷ್ಟು ನೀರು ನಿಲ್ಲುತ್ತದೆ, ಅದರಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರಕುತ್ತದೆ, ಅದಕ್ಕೆ ಎಷ್ಟು ಹಣ ಖರ್ಚು ಬರುತ್ತದೆ ಎಂಬ ಬಗ್ಗೆ ಪೂರ್ವಭಾವಿಯಾಗಿ ಸಿದ್ಧತೆ ನಡೆಸಬೇಕೆಂದು ಅನೇಕ ಸಲ ಹೇಳಿದರೂ ಸಹ ಆ ಬಗ್ಗೆ ಇಲ್ಲಿಯವರೆಗೆ ಏನನ್ನೂ ಮಾಡಿಲ್ಲ ನಮ್ಮ ಮಲೆನಾಡಿನ ಶಾಸಕರು ಇದರ ಬಗ್ಗೆ ಅನೇಕ ಸಲ ಸರ್ಕಾರಕ್ಕೆ ಆಗ್ರಹಪಡಿಸಿದ್ದಾರೆ. ಆದರೂ ಏತಕ್ಕೆ ಕಾರ್ಯಕ್ರಮ ಕೈಕೊಂಡಿಲ್ಲ, ಅಪ್ಪರ್‌ಕೃಷ್ಣಾ ಅಣೆಕಟ್ಟು, ಮತ್ತು ಕಾವೇರಿ ಪ್ರದೇಶದಲ್ಲಿ ಅಣೆಕಟ್ಟುಗಳನ್ನು ಕಟ್ಟುವುದರಿಂದ ಮಾತ್ರ ನಾವು ತೃಪ್ತರಾಗ ಬಹುದೆಂಬ ಭಾವನೆ ಏನಾದರೂ ಸರ್ಕಾರಕ್ಕೆ ಇದೆಯೇ ? ಅಥವಾ ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲ ಸಣ್ಣಪುಟ್ಟ ರೈತರಿಗೂ ಸಹ ಕನಿಷ್ಠ ಪ್ರಮಾಣದ ನೀರಾವರಿ ಸೌಕರ್ಯ ಒದಗಿಸಬೇಕೆಂಬ ಪ್ರಾಮಾಣಿಕತನ ಏನಾದರು ಇದೆಯೇ ಎಂದು ಕೇಳಬೇಕಾಗಿದೆ ; ಈ ಬಗ್ಗೆ ಖಚಿತವಾಗಿ ಹೇಳಬೇಕೆಂದರೆ, ಈ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ನಮ್ಮ ಸರ್ಕಾರದವರು ಮಲತಾಯಿ ಧೋರಣೆ ತಳೆಯುತ್ತಿದ್ದಾರೆ. ಈ ಸಣ್ಣ ನೀರಾವರಿ ಯೋಜನೆಗಳಿಂದ ಪ್ರಯೋಜನ ಪಡೆಯುತಕ್ಕವರು ಸಮಾಜದ ಸಣ್ಣ ಜನರಾಗಿದ್ದಾರೆ. ಇವರಿಗೆ ಯಾವ ಪ್ರಭಾವವೂ ಇರುವುದಿಲ್ಲ ರಾಜಕೀಯ ಶಕ್ತಿ ಇರುವುದಿಲ್ಲ ಹಣಕಾಸಿನ ಅನುಕೂಲ ಇವರಿಗೆ ಇರುವುದಿಲ್ಲ. ತಮಗಿರುವ ತೊಂದರೆಯನ್ನು ಹೇಳಿಕೊಳ್ಳುವಂತಹ ಧಾರ್ಷ್ಟ್ಯ ಮನೋಭಾವ ಇವರಿಗಿರುವುದಿಲ್ಲ, ಇವರು ಇಂದು ಮೂಕ ಪ್ರಾಣಿಗಳಾಗಿದ್ದಾರೆ. ಇವರ ಪರವಾಗಿ ಸರ್ಕಾರದ ಮಂತ್ರಿ ಮಂಡಲದಲ್ಲಿ ಕೆಲಸಮಾಡುತ್ತಿರುವ ಮಂತ್ರಿಗಳಿಗೆ ಇದಕ್ಕಾಗಿ ಸ್ವಲ್ಪ ಹಣವನ್ನು ಕೊಟ್ಟು ಅವರನ್ನು ಸಹ ದೂರ ಕೂರಿಸಿಬಿಟ್ಟಿದ್ದಾರೆ. ಅಂದರೆ ಅವರನ್ನು ಸಹ ಅಸ್ಪೃಶ್ಯರನ್ನಾಗಿ ಮಾಡಿಬಿಟ್ಟಿದಾರೆ. ಮುಖ್ಯವಾಗಿ ಈ ಸರ್ಕಾರದವರು ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ನಿರ್ಲಕ್ಷ್ಯ ಮನೋಭಾವ ತಳೆದಿದೆ ಎಂದು ಆರೋಪ ಮಾಡಬೇಕಾಗಿದೆ. ನಾವು ಏನಾದರು ಮಾಡಿ ಎಂದು ಕೇಳಿಕೊಂಡರೆ ಮಾಡೋಣ ಎಂದು ಹೇಳುತ್ತಾರೆ ಆದರೆ ಮಾಡುವುದಿಲ್ಲ ಮಾನ್ಯ ಚಂದ್ರಶೇಖರ್ ಅವರು ಹೇಳುವಂತೆ ಅವರು ಅದನ್ನು ಮಾಡುವುದರಲ್ಲಿಯೇ ಅವರ ಖಾತೆ ಬದಲಾವಣೆಯಾಗಿರುತ್ತದೆ ನಮ್ಮ ಸಣ್ಣ ನೀರಾವರಿ ಮಂತ್ರಿಗಳು ನಮ್ಮ ಭಾಗಕ್ಕೆ ಬಂದು ಅಲ್ಲಿನ ಸ್ಥಿತಿಯನ್ನು ಕಣ್ಣಾರೆ ನೋಡಬೇಕು, ನಮ್ಮ ರಾಜ್ಯದ ಹಣಕಾಸಿನ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕಮೀಷನರ್ ಅವರಿಗೆ ಸಹ ನಮ್ಮ ಜಿಲ್ಲೆಯ ವಿಚಾರ ಗೊತ್ತಿದೆ, ಏಕೆಂದರೆ ಅವರು ಅಲ್ಲಿ ಸಬ್-ಡಿವಿಜನ್ ಆಫೀಸರ್ ಆಗಿ ಕೆಲಸ ಮಾಡಿದ್ದಾರೆ. ಆದಕಾರಣ ಅವರಿಗೆ ಅಲ್ಲಿನ ಊರುಗಳು, ಮನೆಗಳು, ಕೇರಿಗಳು ಎಲ್ಲ ಗೊತ್ತಿದೆ. ಅದರಂತೆ ಈಗಿನ ಮುಖ್ಯಕಾರ್ಯದರ್ಶಿ ಯವರು ಸಹ ಈ ಮೊದಲು ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿ ಕೆಲಸ ಮಾಡಿದ್ದಾರೆ. ಅವರು ಸಹ ಎಲ್ಲವಿಚಾರಗಳನ್ನೂ ನಮ್ಮ ಜಿಲ್ಲೆಯ ಬಗ್ಗೆ ತಿಳಿದುಕೊಂಡಿದ್ದಾರೆ. ಈ ರೀತಿ ವಿಷಯಗಳು ಗೊತ್ತಿರುವ ಅಧಿಕಾರಿಗಳು ವಿಧಾನಸೌಧದಲ್ಲಿದ್ದಾರೆ ಅವರಿಗೆ ಅಲ್ಲಿನ ವಾಸ್ತವಿಕ ಪರಿಸ್ಥಿತಿ ಚೆನ್ನಾಗಿ ಗೊತ್ತಿರುವ ಕಾರಣ ನಮ್ಮ ಮಲೆನಾಡಿನ ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆಸುವುದಕ್ಕೆ ಪ್ರಯತ್ನ ಮಾಡದಿದ್ದರೆ ಅಲ್ಲಿನ ರೈತರಿಗೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಹೇಳುತ್ತೇನೆ. ಅಲ್ಲಿನ ವಿಷಯ ತಿಳಿದವರು ಇಲ್ಲಿದ್ದರೂ ಸಹ ನಮಗೆ ಯಾವ ಪರಿಹಾರ ಸಿಗುತ್ತಿಲ್ಲ ಅಂದರೆ ನಾವು ಏನು ನತದೃಷ್ಟರೋ ಅಥವಾ ನಾವು ಏನು ಹೇಡಿಗಳಾಗಿದ್ದೇವೋ ಎಂಬುದು ಗೊತ್ತಿಲ್ಲ ನಾವಂತೂ ಹೇಡಿಗಳಲ್ಲ, ಮಲೆನಾಡಿನ ಭಾಗದಿಂದ ಬಂದಿರುವ ಸದಸ್ಯರುಗಳು ಇಲ್ಲಿ ಸುಮಾರು ೫೦ ಮಂದಿ ಇದ್ದಾರೆ.

ಈವತ್ತು ನಾವು ಎಷ್ಟು ಹೇಳಿದರೂ ಕೂಡ ಚನ್ನಬಸಪ್ಪನವರ ಮನಸ್ಸಿಗೆ ಹೋಗಿರುವುದಿಲ್ಲ. ಅವರು ಕೂತು ಕತೆ ಹೇಳುತ್ತಾರೆ. ಒಂದು ಕೆರೆಯಲ್ಲಿ ಮಣ್ಣನ್ನು ತೆಗೆಯುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ? ಏರಿಗಳ ಮೇಲೆ ನೀರು ಅಗಾಧವಾಗಿ ನಿಂತಿರುತ್ತದೆ. ಮಂತ್ರಿಗಳು ನೋಡಿರುವುದು ಮಾತ್ರವಲ್ಲ ಕೇಳಿಯೂ ಇರುವುದಿಲ್ಲ. ತೊಂದರೆಗೆ ಒಳಗಾಗಿರುವವರು ಇದರ ಬಗ್ಗೆ ದೂರು ಕೊಟ್ಟಿರುತ್ತಾರೆ. ಸಣ್ಣ ನೀರಾವರಿ ಕೆಳಗೆ ಬರತಕ್ಕ ವ್ಯವಸಾಯಗಾರರು ಬಾಯಿಯಿಲ್ಲದೆ ಬಸವಣ್ಣನಂತಿದ್ದಾರೆ.

3-30 P. M.

ಶ್ರೀ ಕೆ. ಎಫ್. ಪಟೇಲ್,—ಸಣ್ಣ ಕೆರೆಗಳಲ್ಲಿ ಹೂಳು ತೆಗೆಸುವ ಆಸಕ್ತಿ ಇದೆ ಮತ್ತು ಅದಕ್ಕೆ ಒಂದು ಸಿದ್ಧಾಂತವಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆದರ ಸಿದ್ಧಾಂತಕ್ಕೆ ಈವತ್ತು ಬೆಲೆ ಕೊಡಬೇಕು. ಭಾರತ ಭೂಮಿಯಲ್ಲಿ ವರ್ಣಾಶ್ರಮ ಧರ್ಮವನ್ನು ಬದಲಾವಣೆ ಮಾಡಿರುವುದು ಬಸವಣ್ಣನನ್ನು ನೇಗಿಲಿಗೆ ಹೂಡಿರುವುದು, ಈ ಒಂದು ಸಿದ್ಧಾಂತವನ್ನು ಪಾಲಿಸಿಕೊಂಡು ಬಂದಿರುವುದರಲ್ಲಿ ಅನುಮಾನವಿಲ್ಲ. ಏನು ಬೇಕಾದರೂ ಬದಲಾವಣೆ ಮಾಡಬಹುದು. ಈಗ ಕೆರೆ ವಿಸ್ತೀರ್ಣ ಎಷ್ಟು ಎಂಬುದನ್ನು ಮೊದಲು ಗೊತ್ತುಮಾಡಬೇಕಾಗುತ್ತದೆ. ಮೊದಲು ಕೆರೆ ವಿಸ್ತೀರ್ಣ ಏನಿತ್ತು ಅದಕ್ಕೆ ತಕ್ಕಂಥ ಏರಿಯನ್ನು ಕಟ್ಟಿಸಿ ನೀರು ನಿಲ್ಲಿಸಿದ್ದಾರೆ. ಈಗ ಆ ಏರಿಯನ್ನು ಏರಿಸಿದರೆ ಮೇಲುಗಡೆ ಇರತಕ್ಕ ಭೂಮಿ ಪರಿಸ್ಥಿತಿ ಏನು ಆಗುತ್ತದೆ ಎಂಬುದು ನೋಡಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಕಟ್ಟಿದಂತ ತೂಬು, ವೇಸ್ಟ್‌ವೇರ್‌ಗಳು ಈವರೆಗೂ ಹಾಳಾಗಿಲ್ಲ. ಈಗಿರತಕ್ಕಂಥ ದೊಡ್ಡ ದೊಡ್ಡ ಇಂಜಿನೀಯರ್‌ಗಳು ಕಟ್ಟಿದಂತಹ ಎಷ್ಟೋ ಕೆರೆಗಳು ಹಾಳಾಗಿರುವುದನ್ನು ನಾವು ನೋಡುತ್ತಿದ್ದೇವೆ. ಹಿಂದಿನ ಕಾಲದವರು ಇಟ್ಟಿಗೆಯಲ್ಲಿಯೇ ಕಟ್ಟಿದಂಥ ತೂಬುಗಳನ್ನು ಈವತ್ತಿನದಿವಸ ಅದನ್ನು ಒಡೆಯುವುದಕ್ಕೂ ಆಗುವುದಿಲ್ಲ. ನೀವು ಕಟ್ಟಿಸಿರತಕ್ಕಂಥ ತೂಬುಗಳು ಈವರ್ಷ ಕಟ್ಟಿಸಿದರೆ ಮುಂದಿನ ವರ್ಷಕ್ಕೆ ಹಾಳಾಗಿತ್ತದೆ. ಉದಾಹರಣೆಗಾಗಿ ಹೇಳುವುದಾದರೆ ನಮ್ಮ ಊರಿನಲ್ಲಿ ಕೆಳದಿ ಕೆರೆಯೊಂದು ಇದೆ. ಅದು ಬಹಳ ಹಿಂದಿನ ಕಾಲದಲ್ಲಿ ಕಟ್ಟಿದಂಥ ಕೆರೆ ಈವತ್ತಿನವರೆಗೂ ಯಾವ ರಿಪೇರಿಯನ್ನೂ ಮಾಡಿಲ್ಲ. ಅಷ್ಟು ಚೆನ್ನಾಗಿದೆ. ಅಲ್ಲಿ ಕಟ್ಟಿಸಿರುವ ತೂಬಿನಲ್ಲಿ ಈವತ್ತಿನವರೆಗೂ ನೀರು ಲೀಕ್ ಆಗುತ್ತಾ ಇಲ್ಲ. ಹಿರೆಹಲ್ಲೂರ್ ಕೆರೆ ಅಂತ ಇದೆ, ಕಳೆದ ೫ ವರ್ಷದಲ್ಲಿ ಮೂರು ಸಾರಿ ತೂಬು ಕಟ್ಟಿದ್ದಾರೆ. ಕಟ್ಟಿದ್ದು ಕಟ್ಟಿದ್ದೆ ನೀರು ಮಾತ್ರ ಹೋಗುತ್ತಲೇ ಇದೆ, ಅಲ್ಲಿ ಪ್ರತಿ ವರ್ಷವೂ ನೀರೇ ಇರುವುದಿಲ್ಲ. ಒಂದೊಂದು ತಾಲ್ಲೋಕಿನಲ್ಲಿ ೧೦ ವರ್ಷದಲ್ಲಿ ಎಷ್ಟು ಕೆರೆಗಳಿಗೆ ವೇಸ್ಟ್ ವೇರ್, ಚಾನಲ್ ಕಟ್ಟಿಸಿದ್ದೀರಿ, ಎಷ್ಟು ಕೆರೆಗೆ ತೂಬು ರಿಪೇರಿ ಮಾಡಿದ್ದೀರಿ, ಆ ರೀತಿ ಮಾಡಿದ್ದರೆ ಅವುಗಳು ಸರಿಯಾಗಿ ವ್ಯವಸ್ಥೆಯಲ್ಲಿದೆಯೇ ಎಂಬುದನ್ನು ಆಗಿಂದಾಗ್ಗೆ ನೋಡಿಕೊಳ್ಳುತ್ತಿರಬೇಕು. ೧೫೦ ವರ್ಷಗಳ ಹಿಂದೆ ಕಟ್ಟಿದಂತ ಕೆರೆಗಳ ತೂಬು, ಸ್ಲೂಯಿಸ್ ಒಡೆದು ನೋಡಿದರೂ ಒಂದು ಹನಿ ನೀರು ಈಚೆಗೆ ಹೋಗುವುದಿಲ್ಲ. ಅಷ್ಟು ಚೆನ್ನಾಗಿ ಇವೆ. ಅವುಗಳನ್ನು ಉಳಿಸಿಕೊಂಡು ಬರುವ ಕೆಲಸ ನಮ್ಮ ಮುಂದೆ ಇದೆ. ಈವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ೩೫ ಸಾವಿರ ಕರೆಗಳು ಏನು ಇವೆ ಅದರಲ್ಲಿ ೫ ಸಾವಿರ ಕರೆಗಳು ಹೊಸದಾಗಿ ಕಟ್ಟಿರತಕ್ಕಂಥ ಕೆರೆಗಳಿರಬಹುದು. ಅದರಲ್ಲೂ ಇತ್ತೀಚೆಗೆ ಬರಗಾಲ ಪ್ರದೇಶಗಳಲ್ಲಿ ಕಟ್ಟಿರತಕ್ಕಂಥದ್ದು. ಉಳಿದ ಎಲ್ಲಾ ಕೆರೆಗಳು ಹಿಂದಿನ ಕಾಲದ್ದೆ ಆಗಿವೆ. 'ಬ್ರಿಟೀಷ್ ಸರ್ಕಾರದವರು ಬಂದ ಮೇಲೆ ಅವರು ಯಾವ ಬಂಡವಾಳವನ್ನು ಹಾಕಿರಲಿಲ್ಲ. ಅವು ಹಿಂದಿನ ಕಾಲದವರು ಮಾಡಿದ್ದು. ಅಂಥ ಕೆರೆಗಳಿಗೆ ಸ್ವಾತಂತ್ರ ಬಂದಮೇಲೆ ಈವತ್ತು ನಾವು ಮಾಡಬೇಕಾಗಿರುವುದು' ಏನೆಂದರೆ, ಹೂಳು ತೆಗೆಯುವುದು, ಏನೇನು ದುರಸ್ತಿ ಬೇಕಾಗಿದೆಯೋ ಅದನ್ನು ಮಾಡುವುದು, ಕೆರೆಯ ಅಚ್ಚುಕಟ್ಟನ್ನು ನೋಡಿಕೊಳ್ಳುವುದು, ನೀರನ್ನು ನಿಲ್ಲಿಸಿಕೊಂಡು ವ್ಯವಸಾಯಕ್ಕೆ ಬೇಕಾದಾಗ ಉಪಯೋಗಿಸಿಕೊಳ್ಳುವುದು ಅಷ್ಟನ್ನು ಮಾತ್ರ ನಾವು ಮಾಡಬೇಕಾಗುತ್ತದೆ. ಈಗಿರತಕ್ಕ ೩೫ ಸಾವಿರ ಕೆರೆಗಳಿಗೆ ಕೊನೆಯ ಪಕ್ಷ ಹತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ೩೫×೧೦ ಅಷ್ಟು ಸಾವಿರ ರೂಪಾಯಿ ಹಣ ಬೇಕಾಗುತ್ತದೆ. ಕೆಲವು ಕೆರೆಗಳಿಗೆ ಅಷ್ಟು ಹಣವೂ ಕೂಡ ಬೇಕಾಗಿರುವುದಿಲ್ಲ. ಕೆಲವಕ್ಕೆ ಜಾಸ್ತಿಬೇಕಾಗಬಹುದು. ಮ್ಯಾಸೀವ್ ಪ್ರೋಗ್ರಾಂ ಪ್ರಕಾರ ಒಂದು ಯೋಜನೆಯನ್ನು ಮಾಡಿ. ಇದನ್ನು ನಾವು ಹೇಳುತ್ತಲೇ ಇದ್ದೇವೆ, ಹೇಳಿದಮೇಲೆ ತಾವು ಒಪ್ಪಿಕೊಂಡಮೇಲೆ ಕೆಲಸ ಮಾಡತಕ್ಕ ಪ್ರಯತ್ನ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಕೆರೆಗಳ ವಿಷಯದ ಬಗ್ಗೆ ವಾಸ್ತವ ಚಿತ್ರ ಏನು ಎಂಬುದು ಹಣಕಾಸಿನ ಸಚಿವರಿಗೆ ಏನೂ ಗೊತ್ತಿರುವುದಿಲ್ಲ. ತಕ್ಷಣ ಒಂದು ಕಾರ್ಯಕ್ರಮ ಮಾಡಬೇಕು ಹಣ ಹೋಗುತ್ತದೆ ಎನ್ನುವುದರ ಬಗ್ಗೆ ಹಿಂದು ಮುಂದು ನೋಡಬಾರದು. ಅದನ್ನು ಮಾಡದೆ ಹೋದರೆ ತೀರ ಅನ್ಯಾಯ ಮಾಡಿದಂತಾಗುತ್ತದೆ. ಹೀಗೆಯೇ ಬಿಟ್ಟರೆ ಎಲ್ಲ ಕೆರೆಗಳು ಹಾಳಾಗಿ ಹೋಗುತ್ತವೆ. ಒಂದೊಂದು ಜಿಲ್ಲೆಯಲ್ಲಿ ೨ ತಾಲ್ಲೂಕುಗಳನ್ನು ತೆಗೆದುಕೊಂಡು ಹತ್ತು ಹತ್ತು ಕೆರೆಗಳನ್ನು ಪರಿಶೀಲನೆ ಮಾಡಿ ಅಲ್ಲಿರತಕ್ಕ ಅಸಿಸ್ಟೆಂಟ್ ಇಂಜಿನಿಯರ್‌ಗಳು, ಇನ್ನಿತರ ಸಂಬಂಧಪಟ್ಟ ಅಧಿಕಾರಿಗಳು ಏನು ಇದ್ದಾರೆ ಅವರನ್ನು ಕೂಡಿಸಿಕೊಂಡು ಇಂತಿಂಥ ಕೆರೆಗಳ ಅಚ್ಚುಕಟ್ಟು, ಮೈನರ್ ರಿಪೇರ್ಸ್ ಎಷ್ಟು ಕರೆಗಳಿಗೆ ಮಾಡಬೇಕಾಗಿರುತ್ತದೆ. ತೂಬು ರಿಪೇರಿ ಮಾಡತಕ್ಕ ಕೆರೆಗಳು ಎಷ್ಟು ಇರುತ್ತವೆ, ಸ್ಲೂಯಿಸ್ ರಿಪೇರಿ ಎಷ್ಟು ಕರೆಗಳಿಗೆ ಆಗಬೇಕಾಗಿದೆ. ಹೂಳು ತೆಗೆಯತಕ್ಕ ಕೆರೆಗಳು ಎಷ್ಟು ಇವೆ ಇವೆಲ್ಲವನ್ನು ವಿವರವಾಗಿ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಅನೇಕ ಕಡೆಗಳಲ್ಲಿ ಯಾರು ಹೇಳುವವರು ಕೇಳುವವರು ಇರುವುದಿಲ್ಲ. ಅರ್ಜಿಗಳನ್ನು ಬರೆಯುವವರು ಸಹ ಇರುವುದಿಲ್ಲ. ಅರ್ಜಿಗಳನ್ನು ಬರೆದರೆ ಅದನ್ನು ಗಮನಿಸುವುದು ಇಲ್ಲ. ಯಾರು ರಾಜಕೀಯ ಪುಡಾರಿಗಳು ಇರುತ್ತಾರೆ, ಅವರು ಅಧಿಕಾರಿಗಳ ಜೊತೆಯಲ್ಲಿ ಓಡಾಡಿಕೊಂಡು ನಾಲ್ಕು ಐದು ವರ್ಷಗಳಲ್ಲಿ ಎರಡು ಮೂರು ಸಲವಾದರೂ ನಮ್ಮ ಕಡೆ ಬರುವ ಕೆರೆಗಳನ್ನು ರಿಪೇರಿ ಮಾಡಿಸಿಕೊಳ್ಳತಕ್ಕಂಥ ನಿದರ್ಶನಗಳು ಬೇಕಾದಷ್ಟು ಇವೆ.

ಹಿಂದೆ ತಹಸೀಲ್‌ದಾರರು ಇದ್ದರು ಅವರು ವರ್ಷಕ್ಕೊಂದು ಸಾರಿ ಜಮಾಬಂದಿ ಕೆಲಸ ಮಾಡುತ್ತಿದ್ದರು ಜಿಲ್ಲಾಧಿಕಾರಿಗಳು ಜಮಾಬಂದಿ ಮಾಡುತ್ತಾ ಇದ್ದರು. ಈಗಲೂ ದಾಖಲೆಗಳು ಇವೆ. ಅವರು ಹಳ್ಳಿಗಳಿಗೆ ಹೋದಾಗ ರೈತರನ್ನು ಬರಮಾಡಿಕೊಳ್ಳುತ್ತಿದ್ದರು. ಕೆರೆಯ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ನೇಮಿಸಿರತಕ್ಕಂಥ ನೀರುಗಂಟಿ, ತಳವಾರರನ್ನು ಕರೆಯಿಸಿದ್ದರು. ಅದರ ಬಗ್ಗೆ ಈಗಲೂ ಸರ್ಕುಲರ್ ಇದೆ. ಕೆರೆಯ ದುರಸ್ತಿಯ ಬಗ್ಗೆ ಅವರು ತಿಳಿಸುತ್ತಿದ್ದರು. ಇವತ್ತು ಸರ್ಕಾರದ ಆದೇಶವಿದೆ ಕನಿಷ್ಠ ನೂರು ಎಕರೆ ಮೇಲ್ಪಟ್ಟು ನೀರಾವರಿ ಪ್ರದೇಶ ಇರುವ ಕೆರೆ ಇದ್ದರೆ ಅದರ ಉಸ್ತುವಾರಿಯನ್ನು ನೋಡಿಕೊಳ್ಳಲು ಒಬ್ಬ ಚಾವಡಿ ನೇಮಿಸಬೇಕೆಂದು ಇದೆ. ಆದರೆ ಒಂದೂ ತಾಲ್ಲೂಕಿನಲ್ಲಿ ಒಬ್ಬರನ್ನೂ ನೇಮಿಸಿಲ್ಲ. ಎಷ್ಟೋ ಕಡೆ ಕೆರೆಗಳಿಗೆ ಪಿಕ್‌ಅಪ್ ಕಟ್ಟಿಸಿರುತ್ತಾರೆ. ಅವುಗಳಿಂದ ಸಕಾಲದಲ್ಲಿ ನೀರನ್ನು ಬಿಡುವುದು ಮತ್ತೆ ಮುಚ್ಚತಕ್ಕ ಕೆಲಸವನ್ನು ನೋಡಿಕೊಳ್ಳದೆ ಇರುವುದರಿಂದ ಕೆರೆಯ ನೀರೆಲ್ಲ ಪೋಲಾಗುವ ಸಂದರ್ಭವಿರುತ್ತದೆ. ದೊಡ್ಡ ದೊಡ್ಡ ಕೆರೆಗಳಿಗೆ ಕನಿಷ್ಟಪಕ್ಷ ಒಬ್ಬ ಚಾವಡಿಯನ್ನಾದರೂ ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ನೀವು ಅದನ್ನು ಮಾಡಿಲ್ಲ. ಪ್ರತಿಯೊಂದು ಊರಿನಲ್ಲೂ ಎಲ್ಲಿ ನೋಡಿದರೂ ಕೂಡ ತೋಟಿ ತಳವಾರರನ್ನು ಇಟ್ಟಿದ್ದಾರೆ. ಅವರಿಗೆ ಭೂಮಿಯನ್ನು ಕೊಟ್ಟಿದ್ದಾರೆ. ಅವರಿಗೆ ಸಂಬಳ ಕೊಡುತ್ತಾರೆ, ಅವರು ಎಷ್ಟು ಪ್ರಮಾಣದಲ್ಲಿ ಕೆರೆಗಳನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ, ವಿಸ್ತರಿಸುವುದಕ್ಕೆ ಜವಾಬ್ದಾರಿಯನ್ನು ಇಟ್ಟುಕೊಂಡಿದ್ದರೋ ಇವತ್ತಿನ ದಿವಸ ಸರ್ಕಾರ ಆ ಕೆಲಸವನ್ನು ಅಷ್ಟು ಪ್ರಮಾಣದಲ್ಲಿ ಮಾಡುತ್ತಾ ಇಲ್ಲ. ನಿಮಗೆ ಯಾವುದರ ಬಗ್ಗೆ ಆಸಕ್ತಿ ಇದೆ ಎಂದರೆ ಎಲೆಕ್ಷನ್ ಬಗ್ಗೆ ಆಸಕ್ತಿ ಇದೆ, ಮಂತ್ರಿಗಳಾಗಿಯೇ ಇರಬೇಕೆಂದು ಆಸಕ್ತಿ ಇದೆ; ನಿಮ್ಮ ಆಸ್ತಿಪಾಸ್ತಿಯನ್ನು, ಮಾಡಿರುವ ಸಂಪಾದನೆಯನ್ನು ರಕ್ಷಣೆ ಮಾಡಿಕೊಳ್ಳಬೇಕೆಂದು ಇದೆ. ಇನ್ನೂ ಯಾವುದರಲ್ಲಾದರೂ ಆಸಕ್ತಿ ಇದ್ದರೆ ಅದನ್ನು ದಯವಿಟ್ಟು ತಿಳಿಸಿ. ಮಾನ್ಯ ಚನ್ನಬಸಪ್ಪನವರು ಇಲ್ಲಿ ಏನೋ ಪುರಾಣವನ್ನು ಊದುತ್ತಾರೆ. ನಾನು ಹೇಳುತ್ತೇನೆ; ಇವತ್ತಿನ ದಿವಸ ಅವರ ಜಮೀನಿನ ಹತ್ತಿರ ಬಹಳಷ್ಟು ಕೆರೆಗಳನ್ನು ಮಾಡಿರಿಕೊಂಡಿದ್ದಾರೆ. ನಾನು ಹೇಳುತ್ತೇನೆ ತನ್ನದೇ ಮೇರು ಪರ್ವತ ಎಂದು ತಿಳಿದುಕೊಂಡು ಉದ್ಧಟತನ ಮಾಡುವ ಕಾಲವಲ್ಲ; ಇದು. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅಷ್ಟೇ ಪ್ರಮಾಣದಲ್ಲಿ ಕೆರೆಗಳನ್ನು ಮಾಡುವುದಾದರೆ; ಸುಮಾರು ೩೦೧ ಕೋಟಿ ರೂಪಾಯಿಗಳು ಈವತ್ತಿನದಿವಸ ಖರ್ಚಾಗುತ್ತದೆ. ಹಿಂದೆ ಮಾಡಿರತಕ್ಕಂಥ ಕೆರೆಗಳನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇದರಿಂದ ಸುಮಾರು ೪ ಲಕ್ಷ ಚಿಲ್ಲರೆ ಎಕರೆ ನೀರಾವರಿಯಾಗುತ್ತದೆ. ಜನತೆಯ ಮೇಲೆ ನೀರಿನ ತೆರಿಗೆಯನ್ನು ಹಾಕುತ್ತೀರಿ. ಅವರಿಗೆ ನೀರನ್ನು ಪುಗಸಟ್ಟೆ ಕೊಟ್ಟಿಲ್ಲ. ನೀವು ಬಂಡವಾಳವನ್ನು ಹಾಕಿಲ್ಲ, ಅಲ್ಪಸ್ವಲ್ಪ ರಿಪೇರಿ ಮಾಡಿದ್ದರೆ ಅದರ ಪ್ರಯೋಜನ ವ್ಯವಸಾಯಗಾರರಿಗೆ ಸಿಕ್ಕುತ್ತಿತ್ತು. ಆದರೆ ಇವತ್ತಿನ ದಿವಸ ವ್ಯವಸಾಯಗಾರರಿಗೆ ಯಾವ ಪ್ರಯೋಜನವೂ ಸಿಕ್ಕಿಲ್ಲ. ಅಲ್ಲಿ ನೀರು ನಿಲ್ಲುತ್ತದೆಯೋ, ಇಲ್ಲವೇ ಎಂದು ವಾಸ್ತವಿಕವಾಗಿ ಯಾರು ಅಲ್ಲಿ ಹೋಗಿ ನೋಡುತ್ತಾರೆ ? ವಾಟರ್ ಇಸ್ ಮೇಡ್ ಆವೇಲಬಲ್ ಎಂದು ಅವರು ಷರಾ ಬರೆಯುತ್ತಾರೆ ಬಹುಶಃ ಇದನ್ನು ಬ್ರಹ್ಮನೇ ಏನಾದರೂ ಬರೆದರು ಅವನೇ ಕೊಡಬೇಕಾಗಿ ಬರುತ್ತದೆ. ಜನತೆಯಲ್ಲಿ ಇವತ್ತಿನದಿವಸ ಅಪ್ರಾಮಾಣಿಕತನದ ಪ್ರತೀಕ ಬೆಳೆದು ನಿಂತಿದೆ. ನಾವು ಎಷ್ಟೋ ಶಾಸನಗಳನ್ನು ಮಾಡಿದರೂ ಕೂಡ ಅದನ್ನು ಕಾರ್ಯಗತ ಮಾಡತಕ್ಕ ಕ್ಷೇತ್ರದಲ್ಲಿ ಅಷ್ಟೇ ಪ್ರಾಮಾಣಿಕತನ ಇವತ್ತು ಕಂಡುಬರುತ್ತಿಲ್ಲ. ಇದನ್ನು ಗಮನದಲ್ಲಿಟ್ಟು ಕೊಂಡು ನೀರಿನ ತೆರಿಗೆಯನ್ನು ಕೊಡಬೇಕು ಕೆರೆಗಳಿಂದ ಪ್ರಯೋಜನವನ್ನು ಜನತೆ ಪಡೆಯುತ್ತಿದ್ದರೆ ಖಂಡಿತವಾಗಿಯೂ ಕೂಡ ಜನತೆ ನೀರಿನ ತೆರಿಗೆಯನ್ನು ಕೊಡುವುದಕ್ಕೆ ಹಿಂದು ಮುಂದು ನೋಡುವುದಿಲ್ಲ. ತಾವು ಈಗ ಯಾವ ಯಾವ ಕೆರೆಗಳಿಗೆ ನೀರಿನ ದರ ಹಾಕಿದ್ದೀರಿ ಅಂಥ ಕೆರೆಗಳ ಪೈಕಿ ಒಂದೊಂದು ತಾಲ್ಲೂಕಿನಲ್ಲಿ ಎರಡೆರಡು ಕೆರೆಗಳನ್ನು ಪರಿಶೀಲಿಸುವ ಸಲುವಾಗಿ ಆರಿಸಿಕೊಳ್ಳಿ. ಇದರ ಬಗ್ಗೆ ಒಂದು ಸಮಗ್ರವಾದ ಕಾರ್ಯಕ್ರಮವನ್ನು ಎಷ್ಟು ದಿವಸದಲ್ಲಿ ತೆಗೆದುಕೊಳ್ಳುತ್ತೀರಿ ಎಂಬುದನ್ನು ನಾನು ಕೇಳುತ್ತೇನೆ. ತಮ್ಮ ಕೈಯಲ್ಲಿ ಈ ಕೆಲಸವನ್ನು ಮಾಡಲಿಕ್ಕೆ ಆಗದೇ ಹೋದ ಪಕ್ಷದಲ್ಲಿ ಅವುಗಳಿಗೆ ಒಂದು ಅಪ್ ಟು ಡೇಟ ಜಾತಕವನ್ನಾದರೂ ಬರೆಸಿ ಕೊಡಿ. ಯಾರೇ ಬಂದರೂ ಕೂಡ ಆ ಜಾತಕನನ್ನು ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಾನು ಒಂದು ಮಾತು ಹೇಳುತ್ತೇನೆ. ಇದನ್ನು ತಾವೂ ಕೂಡ ನೋಡಿದ್ದೀರಿ, ಒಂದು ಕಲ್ಲಿನ ಮೇಲೆ ಒಬ್ಬ ಹಸ್ತ ಸಾಮುದ್ರಿಕ ಕುಳಿತಿರುತ್ತಾನೆ. ಅವನು ಯಾರು ಬಂದರೂ ಕೂಡ ಹಸ್ತ ಸಾಮುದ್ರಿಕೆ ನೋಡುತ್ತಾನೆ.

MR. DEPUTY SPEAKER.—It is self employment solving the unemployment. ಆದಷ್ಟು ಬೇಗ ಮುಗಿಸಿ

ಶ್ರೀ ಕಾಗೋಡು ತಿಮ್ಮಪ್ಪ.— ಇವತ್ತು ನಮ್ಮ ಮಲೆನಾಡಿನಲ್ಲಿ ಅನೇಕ ಕೆರೆಗಳಿವೆ. ನಾನು ಹಿಂದೊಮ್ಮೆ ಮಲೆನಾಡು ಅಭಿವೃದ್ಧಿ ಮಂಡಲಿ ಎಂದು ಒಂದು ಮಂಡಲಿಯನ್ನು ರಚನೆ ಮಾಡಿ ಎಂದು ಹೇಳಿದ್ದೆ. ಮಲೆನಾಡಿನ ದೊಡ್ಡ ಪ್ರದೇಶದಲ್ಲಿ ಸದಾ ಕಾಲದಲ್ಲೂ ಕೂಡ ನೀರು ಹರಿಯತಕ್ಕಂಥ ಸಣ್ಣ ಸಣ್ಣ ಹಳ್ಳಗಳಿವೆ. ಇವುಗಳಿಂದ ನೀರನ್ನು ಬಳಸತಕ್ಕ ಪ್ರಯತ್ನವನ್ನು ಇದುವರೆಗೂ ಕೂಡ ಮಾಡಿಲ್ಲ.

ಅದನ್ನು ಮಾಡಿದರೆ ಸುಮಾರು ೪-೫ ಲಕ್ಷ ಎಕರೆ ಪ್ರದೇಶವನ್ನು ಬಹಳ ಸುಲಭವಾಗಿ ನೀರಾವರಿಯನ್ನಾಗಿ ಮಾಡಬಹುದು. ಇದಕ್ಕಾಗಿ ಕೋಟ್ಯಾನುಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಬೇಡ. ಕೇವಲ ಎರಡು-ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಾದರೆ ಸಣ್ಣ ಸಣ್ಣ ಪಿಕಪ್‌ಗಳನ್ನು ಮಾಡಿ ನೀರನ್ನು ಬೇರೆ ಕಡೆಗೆ ತಿರುಗಿಸಿ ಅದನ್ನು ಉಪಯೋಗಿಸಿಕೊಂಡರೆ ಖಂಡಿತವಾಗಿಯೂ ಇವೊತ್ತು ಒಂದು ಎಕರೆಗೆ ಒಂದು ಸಾವಿರ ರೂಪಾಯಿಯೊಳಗಾಗಿ ನೀರನ್ನು ಒದಗಿಸಿಕೊಡುವುದಕ್ಕೆ ಆಗುತ್ತದೆ. ಮಲೆನಾಡು ಪ್ರದೇಶದಲ್ಲಿ ಅನಾವಶ್ಯಕವಾಗಿ ಹಾಳಾಗತಕ್ಕಂಥ ನೀರು ಬಹಳವಾಗಿದೆ. ಈಗ ಎಷ್ಟು ಪ್ರಮಾಣದಲ್ಲಿ ಅನಾವಶ್ಯಕವಾಗಿ ನೀರು ಹಾಳಾಗಿ ಹೋಗುತ್ತಿದೆಯೋ ಅಷ್ಟೇ ಪ್ರಮಾಣದಲ್ಲಿ ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು. ತಾವು ಈ ಬಗ್ಗೆ ಒಂದು ಸರ್ವೆಯನ್ನು ತಾಲ್ಲೂಕು, ಹೋಬಳಿ, ಗ್ರಾಮಗಳಲ್ಲಿ ನಡೆಸಿ ಮುಂದೆ ಇದನ್ನು ಹಂತ ಹಂತವಾಗಿ ಕಾರ್ಯಗತ ಮಾಡಿ.

ಅಧ್ಯಕ್ಷರೇ, ತಮಗೂ ಗೊತ್ತಿದೆ. ಪಶ್ಚಿಮ ಘಟ್ಟದ ಮೇಲೆ, ಪಶ್ಚಿಮ ಘಟ್ಟದ ಕೆಳಗೆ ಈಗ ಹರಿಯುತ್ತಿರುವ ನೀರು ಅನಾವಶ್ಯಕವಾಗಿ ಸಮುದ್ರಕ್ಕೆ ಹೋಗುತ್ತಿದೆ. ಗೇರುಸೊಪ್ಪೆ ಜಲಪಾತಕ್ಕೆ ಶರಾವತಿ ಯೋಜನೆಯಿಂದ ಎಷ್ಟು ಪ್ರಮಾಣದಲ್ಲಿ ನೀರು ಹೋಗುತ್ತಿದೆ, ಆ ನೀರನ್ನು ಸರಿಯಾಗಿ ಬಳಸಿಕೊಂಡರೆ ಸ್ವಲ್ಪ ಹೆಚ್ಚು ಕಡಿಮೆ ನಮ್ಮ ಕಾರವಾರದವರೆಗೆ ತೆಗೆದುಕೊಂಡು ಹೋಗಬಹುದು. ಕಾಳಿ ನದಿ ಎಲ್ಲಾ ಕಾಲದಲ್ಲೂ ಕೂಡ ಹರಿಯುತಕ್ಕಂಥ ನದಿ. ಅದರ ನೀರು ಅನಾವಶ್ಯಕವಾಗಿ ಸಮುದ್ರಕ್ಕೆ ಸೇರುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಅಲ್ಲಿ ಲಿಫ್ಟ್ ಇರಿಗೇಷನನ್ನು ಹಾಕುವುದಕ್ಕೆ ಏರ್ಪಾಡು ಮಾಡಿ. ವರದಾ ನದಿ, ತುಂಗಾನದಿ, ಭದ್ರಾನದಿ ಇವೆಲ್ಲಾ ಮಲೆನಾಡಿನಲ್ಲೆ ಇವೆ. ಇವುಗಳಲ್ಲಿ ಬಹಳ ನೀರು ಅನಾವಶ್ಯಕವಾಗಿ ಹೋಗುತ್ತದೆ. ಇವತ್ತು ಈ ನದಿಗಳಿಂದ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗುತ್ತಿಲ್ಲ. ಅಪ್ಪರ್ ಕೃಷ್ಣಾ ಬೇಸಿನ್‌ಗೆ ಈ ನಮ್ಮ ವರದಾ ನದಿಯೂ ಕೂಡ ಹೋಗಿ ಸೇರುತ್ತದೆ. ಕೃಷ್ಣಾ ನೀರಿನ ವಿವಾದದಲ್ಲೂ ಕೂಡ ನಮಗೆ ಅಂದರೆ ಕರ್ನಾಟಕಕ್ಕೆ ಅನ್ಯಾಯವಾಯಿತು. ಅಲ್ಲಿ ಏನಾಗಿದೆ ಎಂಬುದು ತಮಗೆ ಗೊತ್ತಿದೆ. ಅಲ್ಲಿ ಒಂದು ಹಳ್ಳಕ್ಕೆ ಪಂಪ್‌ಸೆಟ್ ಹಾಕಿಕೊಳ್ಳುವ ಹಾಗಿಲ್ಲ. ಖುಷ್ಕಿ ಜಮೀನಿಗೆ ನೀರನ್ನು ಹಾಯಿಸಿಕೊಳ್ಳಬೇಕಾಗುತ್ತದೆ. ಅಲ್ಲೆ ಒಳ್ಳೆಯ ಜಮೀನು ಇದೆ. ನೀರಿನ ಅನುಕೂಲತೆ ಸಿಕ್ಕಿದರೆ ಒಳ್ಳೆಯ ವ್ಯವಸಾಯ ಮಾಡಬಹುದು. ಯುಟಿಲೈಸಿಂಗ್ ಆಫ್ ವೇಸ್ಟ್ ವಾಟರ್, ಅದು ಹೋಗುತ್ತದೆ. ಆದುದರಿಂದ ಇವತ್ತಾದರೂ ಕೂಡ ಕೃಷ್ಣಾ ನದಿಗೆ ಸೇರತಕ್ಕ ಅನೇಕ ಹಳ್ಳಗಳು ಏನಿವೆ ಕಾವೇರಿ ಬೇಸಿನ್‌ಗೆ ಸೇರತಕ್ಕ ಅನೇಕ ಹಳ್ಳಗಳು ಏನಿವೆ ಇವುಗಳ ಎರಡೂ ಪಕ್ಕದಲ್ಲಿ ಸಣ್ಣ ಸಣ್ಣ ಪಿಕಪ್ ಕಟ್ಟಿ ಲಿಫ್ಟ್ ಇರಿಗೇಷನ್ ಮಾಡಿ ನೀರನ್ನು ಕೊಟ್ಟರೆ ಲಕ್ಷಾವಧಿ ಎಕರೆಗಳನ್ನು ನೀರಾವರಿಯನ್ನಾಗಿ ಮಾಡುವುದಕ್ಕೆ ಸಾಧ್ಯವಿದೆ.

ಇವತ್ತು ದೊಡ್ಡ ಅಣೆಕಟ್ಟನ್ನು ಕಟ್ಟಿ ಮುಳುಗಿಸಬೇಕು ಎಂದು ಹೊರಟಿದ್ದಾರೆ. ಅದನ್ನು ಮಾಡುವುದಕ್ಕಿಂತ ಸಣ್ಣ ಸಣ್ಣ ನೀರಾವರಿಗಳನ್ನು ಮಾಡಿ ೫೦ ಎಕರೆ ೨೫ ಎಕರೆಗೆ ಎಲ್ಲೆಲ್ಲಿ ನೀರಾವರಿ ಬರತಕ್ಕ ಪ್ರದೇಶ ಇದೆ, ಅದನ್ನು ಹುಡುಕಿ ಸಣ್ಣ ನೀರಾವರಿಯನ್ನು ಮಾಡಿದರೆ ಅನುಕೂಲವಾಗುತ್ತದೆ. ನಾವು ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಿ ಕೆಲವೇ ಕೆಲವು ಪ್ರದೇಶಗಳಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಿ, ಅಭಿವೃದ್ಧಿ ಮಾಡುವುದಕ್ಕಿಂತ ಹೆಚ್ಚಾಗಿ ಎಲ್ಲಾ ತಾಲ್ಲೂಕುಗಳಲ್ಲಿ, ಎಲ್ಲಾ ಜಿಲ್ಲೆಗಳಲ್ಲಿ ಸಮಾನವಾದಂಥ ನೀರಾವರಿ ಕ್ಷೇತ್ರವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಕರ್ನಾಟಕ ರಾಜ್ಯ ವಿಶಾಲವಾದಂಥ ರಾಜ್ಯ. ಇಲ್ಲಿ ವ್ಯವಸಾಯವೇ ನಮ್ಮ ಸಂಪತ್ತು. ಶೇಕಡ ೬೦ ರಷ್ಟು ಆದಾಯ ಇದರಿಂದ ಬರತಕ್ಕಂಥದು ಇದೆ. ಮಾನ್ಯ ಕೃಷ್ಣಾ ಅವರು ಕೈಗಾರಿಕಾ ಸಚಿವರು ಆದ ಮೇಲೆ ಮುಂಚನಹಳ್ಳಿಗೆ ನೀರಾವರಿ ಮಾಡಿದರು ಎಂದರೆ ನಮ್ಮ ನಿಮ್ಮ ಕ್ಷೇತ್ರಕ್ಕೆ ಮಾಡುವುದಕ್ಕಾಗುತ್ತದೆಯೊ, ಅದು ಬೇರೆ ವಿಷಯ. ಸಮಾನತೆ ಕಾಣಬೇಕಾದರೆ ಎಲ್ಲಾ ಕ್ಷೇತ್ರಗಳಲ್ಲೂ ವ್ಯವಸಾಯ ಅಭಿವೃದ್ಧಿ ಆದರೆ ಮಾತ್ರ ಸಮಾನತೆಯನ್ನು ಕಾಣುವುದಕ್ಕೆ ಆಗುತ್ತದೆ. ಅದನ್ನೇ ನಾವು ಅಪೇಕ್ಷೆ ಮಾಡುವುದು. ಸರ್ಕಾರದವರು ದೊಡ್ಡ ನೀರಾವರಿ ಎಲ್ಲೆಲ್ಲಿ ಎಷ್ಟೆಷ್ಟು ಬರುತ್ತದೆ ಎನ್ನುವ ಅಂಕಿಅಂಶಗಳನ್ನು ಈ ಪುಸ್ತಕದಲ್ಲಿ ಕೊಟ್ಟಿದ್ದಾರೆ. ವಿವಿಧ ಮೂಲಗಳಿಂದ ನೀರಾವರಿ ಪ್ರದೇಶ ಎಂದು ಒಂದು ಚಾರ್ಟ್ ಕೊಟ್ಟಿದ್ದಾರೆ. ಅದರಲ್ಲಿ ಕಾಲುವೆಗಳು, ಕೆರೆಗಳು, ಬಾವಿಗಳು ಇತರ ಮೂಲಗಳಿಂದ ಎಂದು ಇದೆ. ಅದರಲ್ಲಿ ಕಾಲುವೆಗಳು ಎಲ್ಲೆಲ್ಲಿ ದೊಡ್ಡ ನೀರಾವರಿ ಪ್ರದೇಶ ಬರುತ್ತದೆ ಎಂದರೆ, ರಾಯಚೂರು ಜಿಲ್ಲೆ ತೆಗೆದುಕೊಂಡರೆ ೧೨೦ ಡಿಗ್ರಿಗೆ ಹೋಗುತ್ತದೆ, ಇನ್ನು ಶಿವಮೊಗ್ಗಕ್ಕೆ ಬಂದರೆ ೬೦ ಡಿಗ್ರಿಗೆ ಬರುತ್ತದೆ, ಬೆಳಗಾಂಗೆ ೩೦ಕ್ಕೆ ಬರುತ್ತದೆ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇಲ್ಲವೇ ಇಲ್ಲ, ಕೋಲಾರದಲ್ಲಿ ಇಲ್ಲವೇ ಇಲ್ಲ, ಬೆಂಗಳೂರಿನಲ್ಲಿ ಇಲ್ಲವೇ ಇಲ್ಲ, ಮಂಡ್ಯಕ್ಕೆ ಬಂದರೆ ೬೦ ಬರುತ್ತದೆ, ಚಿತ್ರದುರ್ಗ ೩೫, ಮೈಸೂರು ೩೦ರಷ್ಟು ಬರುತ್ತದೆ. ಆಮೇಲೆ ತುಮಕೂರಿನಲ್ಲಿ ಇಲ್ಲ, ಧಾರವಾಡದಲ್ಲಿ ೫೦ಷ್ಟು ಬರುತ್ತದೆ, ಬಿಜಾಪುರ ೬ರಷ್ಟು ಬರುತ್ತದೆ, ಬಳ್ಳಾರಿ ಸುಮಾರು ೩೦ರಷ್ಟು ಬರುತ್ತದೆ, ಹಾಸನ ೩೦ಷ್ಟು ಬರುತ್ತದೆ, ಚಿಕ್ಕಮಗಳೂರು ೫ರಷ್ಟು ಬರುತ್ತದೆ, ಗುಲ್ಬರ್ಗ ಇಲ್ಲ, ಉತ್ತರ

ಕನ್ನಡದಲ್ಲಿ ಇಲ್ಲ, ಬೀದರ್‌ದಲ್ಲಿ ಇಲ್ಲವೇ ಇಲ್ಲ, ಕೊಡಗು ೨ರಷ್ಟು ಬರುತ್ತದೆ ಇದು ದೊಡ್ಡ ನೀರಾವರಿ ಕ್ಷೇತ್ರದಲ್ಲಿ ಕಾಣತಕ್ಕ ಚಿತ್ರ. ಇನ್ನು ಕೆರೆಗಳು, ಭಾವಿಗಳನ್ನು ಲೆಕ್ಕ ಹಾಕಿದರೆ ೫ರಷ್ಟು ರಾಯಚೂರಿನಲ್ಲಿ ಸಿಕ್ಕುತ್ತದೆ ಶಿವಮೊಗ್ಗದಲ್ಲಿ ೨ ಪಾಯಿಂಟ್‌ರಷ್ಟು ಸಿಗುತ್ತದೆ, ಬೆಳಗಾಂನಲ್ಲಿ ಸುಮಾರು ೩ರಷ್ಟು ಅಂದರೆ ೩೫ ರಿಂದ ೯೫ರವರೆಗೆ ಬರುತ್ತದೆ, ಕೋಲಾರದಲ್ಲಿ ಬಾವಿ ಜಾಸ್ತಿ ಇವೆ ಬೆಂಗಳೂರಿನಲ್ಲಿ ಅದಕ್ಕಿಂತ ಕಡಿಮೆ ಮಂಡ್ಯದಲ್ಲಿ ೨ ಪಾಯಿಂಟ್ ಬರುತ್ತದೆ, ಚಿತ್ರದುರ್ಗದಲ್ಲಿ ೧೦ ಪಾಯಿಂಟ್ ಬರುತ್ತದೆ, ತುಮಕೂರಿನಲ್ಲಿ ೩೦ರಷ್ಟು ಬರುತ್ತದೆ. ಧಾರವಾಡದಲ್ಲಿ ೫ರಷ್ಟು ಬರುತ್ತದೆ, ಬಿಜಾಪುರದಲ್ಲಿ ೩೫ ರಿಂದ ೪೦ರವರೆಗೆ ಬರುತ್ತದೆ, ಬಳ್ಳಾರಿಯಲ್ಲಿ ೫ರಷ್ಟು, ಗುಲ್ಬರ್ಗದಲ್ಲಿ ೧೦ರಷ್ಟು ಬರುತ್ತದೆ ಹೆಚ್ಚು ಕಡಿಮೆ ಶಿವಮೊಗ್ಗದಲ್ಲಿ ಕೆರೆಗಳು ಜಾಸ್ತಿ ಇವೆ, ಅಲ್ಲಿ ೩ ರಷ್ಟು ಇದೆ. ಕೋಲಾರ, ಬೆಂಗಳೂರು, ಧಾರವಾಡ, ಹಾಸನ ಮತ್ತು ಚಿಕ್ಕಮಗಳೂರು ಇಂತಹ ಪ್ರದೇಶಗಳಲ್ಲಿ ಕೆರೆಗಳು ಹೆಚ್ಚಾಗಿ ಸಿಕ್ಕುತ್ತವೆ. ಆದುದರಿಂದ ಇವತ್ತು ಇತರೆ ಮೂಲಗಳು ಎಂದರೆ ಕೆಲವು ಕಡೆ ಕೆರೆಗಳು ಇಲ್ಲವೇ ಇಲ್ಲ, ಕೆಲವು ಕಡೆ ಸ್ವಲ್ಪಮಟ್ಟಿಗೆ ಇವೆ ಶಿವಮೊಗ್ಗದಲ್ಲಿ ಸ್ವಲ್ಪಮಟ್ಟಿಗೆ ಸಿಗುತ್ತದೆ, ರಾಯಚೂರಿನಲ್ಲಿ ಸಿಕ್ಕುವುದೇ ಇಲ್ಲ, ಬೆಳಗಾಂನಲ್ಲಿ ೫ ಪಾಯಿಂಟ್ ಸಿಗುತ್ತದೆ, ದಕ್ಷಿಣಕನ್ನಡದಲ್ಲಿ ಲಿಫ್ಟ್ ಇರಿಗೇಷನ್ ಕೆಲವು ಬರುತ್ತದೆ ಇದನ್ನು ಅವಲೋಕನ ಮಾಡಿದರೆ ಇವತ್ತು ದೊಡ್ಡ ನೀರಾವರಿ ಸಿಗತಕ್ಕಂಥಾದ್ದು ಹೆಚ್ಚು ಪ್ರಮಾಣದಲ್ಲಿ ೭ ಜಿಲ್ಲೆಗಳಲ್ಲಿ, ಇನ್ನು ಉಳಿದಿರತಕ್ಕ ೧೨ ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದ ನೀರಾವರಿ ಇಲ್ಲ. ಆದುದರಿಂದ ಸಣ್ಣ ಪ್ರಮಾಣದ ನೀರಾವರಿ ನಮ್ಮ ರಾಜ್ಯಕ್ಕೆ ಕಲ್ಪವೃಕ್ಷ ವರ ಎನ್ನುವುದನ್ನು ಈ ಅಂಕಿಅಂಶಗಳಿಂದ ನಾವು ಕಾಣಬಹುದು. ಇಂಥ ಕಲ್ಪವೃಕ್ಷವಾಗಿರತಕ್ಕಂಥ ಮತ್ತು ಎಲ್ಲಾ ವ್ಯವಸಾಯಗಾರರಿಗೆ ಎರಡು ಹೊತ್ತಿನ ಕೂಳು, ಕಡೆಗೆ ಗಂಜಿ ಸಿಕ್ಕುವ ರೀತಿಯಲ್ಲಿ ಫಸಲನ್ನು ಬೆಳೆಯುವುದಕ್ಕೆ ಸಹಾಯವಾಗುವ ಸಣ್ಣ ನೀರಾವರಿಯನ್ನು ಅಭಿವೃದ್ಧಿಪಡಿಸುವುದು ಇವತ್ತು ಕರ್ನಾಟಕ ರಾಜ್ಯದ ಒಂದು ಪ್ರಮುಖವಾದಂಥ ಕೆಲಸ ಎಂದು ನಾವು ತಿಳಿದುಕೊಳ್ಳಬೇಕು. ನಾವು ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡುತ್ತಾ ಇಲ್ಲ. ಇದರ ಗಂಭೀರತೆಯನ್ನು ಅಥವಾ ಇದರ ಪ್ರಾಮುಖ್ಯತೆಯನ್ನು ಆಳವಾಗಿ ದೀರ್ಘವಾಗಿ ಅಭ್ಯಾಸ ಮಾಡಿದರೂ ಸಾಲದು. ಅನೇಕ ಸಾರಿ ಶಾಸಕರಾಗಿರತಕ್ಕವರು ಅನೇಕ ತಜ್ಞರುಗಳ ಜೊತೆಗೆ ಅನೇಕ ಸೆಮಿನಾರ್‌ಗಳನ್ನು ಮಾಡಬೇಕು, ಅನೇಕ ಚರ್ಚೆಗಳನ್ನು ಮಾಡಬೇಕು, ಅನೇಕ ವಿಚಾರ ವಿಮರ್ಶೆಗಳನ್ನು ಮಾಡಬೇಕು, ಹೊಸ ಹೊಸ ವಿಧಾನಗಳನ್ನು ಕಂಡುಹಿಡಿಯಬೇಕು ಮತ್ತೆ ಭೂಮಿಯ ಒಳಗೆ ಇರತಕ್ಕ ನೀರು, ಅಂತರ್ಜಲವನ್ನು ಹೇಗೆ ತೆಗೆದು ಉಪಯೋಗಿಸಬೇಕು ಎನ್ನುವುದು ಕೂಡ ಇದೇ ಕ್ಷೇತ್ರದಲ್ಲಿ ಬರುತ್ತದೆ. ಆದುದರಿಂದ ಅಂತರ್ಜಲವನ್ನು ಎಷ್ಟು ಪರಿಣಾಮಕಾರಿಯಾಗಿ ವ್ಯವಸಾಯಕ್ಕೆ ಬಳಸಬಹುದು ಎನ್ನುವುದನ್ನು ಇವತ್ತು ನೋಡಬೇಕು. ಇತ್ತೀಚೆಗೆ ಅನೇಕ ಸಾಧನಗಳು ಬಂದಿವೆ. ೧೦೦ ರಿಗ್ಸ್ ಇದ್ದರೂ ಕೂಡ ಕೆಲವು ಕಡೆ ಬರುವುದಿಲ್ಲ. ಕೆಲವು ಕಡೆ ಇದನ್ನೆಲ್ಲಾ ಮಾಡೋಣ ಎಂದರೆ ಸಾಕಷ್ಟು ಯಂತ್ರಗಳು ಕೂಡ ಇಲ್ಲ. ಇತ್ತೀಚೆಗೆ ಬರಗಾಲ ಕೆಲಸದ ಸಂದರ್ಭದಲ್ಲಿ ಕೆಲವು ರಿಗ್‌ಗಳನ್ನು ತರಿಸಿದ್ದಾರೆ ಅವು ಕೆಲವು ಕಡೆ ಕೆಲಸ ಮಾಡುತ್ತಿವೆ ಇನ್ನು ಕಡೆ ಕೆಲಸ ಮಾಡುತ್ತಾ ಇಲ್ಲ. ಈಗ ಇರತಕ್ಕ ಯಂತ್ರಗಳಿಂದ ಎಲ್ಲಾ ಜಿಲ್ಲೆಗಳಲ್ಲಿ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಆದುದರಿಂದ ಅಂತರ್ಜಲವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕಾದರೆ ಯಂತ್ರ ಸಾಮಾಗ್ರಿಗಳು ಇಮ್ಮಡಿಯಾಗಬೇಕು. ಇವತ್ತು ನಮ್ಮ ತಜ್ಞರು ಅಭಿಪ್ರಾಯ ಕೊಟ್ಟ ಅನೇಕ ಕಡೆಗಳಲ್ಲಿ ನೀರು ಸಿಕ್ಕುತ್ತಾ ಇಲ್ಲ. ಅಭಿಪ್ರಾಯ ಕೊಡದೇ ಇರತಕ್ಕ ಕಡೆಗಳಲ್ಲಿ ನೀರು ಸಿಗತಕ್ಕ ಪ್ರಸಂಗ ಇದೆ. ಏಕೆಂದರೆ, ಇವತ್ತು ಸಲಕರಣೆಗಳು ತುಕ್ಕು ಹಿಡಿದಿವೆ. ಅದೇ ಯಂತ್ರಗಳನ್ನು ಇಟ್ಟುಕೊಂಡು ಇವತ್ತು ಭೂಮಿಯಲ್ಲಿರತಕ್ಕ ಅಂತರ್ಜಲವನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಹೊಸ ಯಂತ್ರಗಳನ್ನು ಸಲಕರಣೆಗಳನ್ನು ಪಡೆಯಬೇಕು ಎನ್ನುವ ಅಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದರು. ಸರ್ಕಾರ ಏನು ಮಾಡುತ್ತಿದೆ ಎಂದರೆ ನಿದ್ದೆ ಹೊಡೆಯುತ್ತಿದೆ. ಆದುದರಿಂದ ನಮ್ಮ ಸಾಧನಗಳು ಚೆನ್ನಾಗಿ ಇದ್ದರೆ, ಸಲಕರಣೆಗಳು ಚೆನ್ನಾಗಿ ಇದ್ದರೆ ನಾವು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಅಂತರ್ಜಲವನ್ನು ಉಪಯೋಗಿಸಿಕೊಳ್ಳುವ ದೃಷ್ಟಿಯಿಂದ ಹೊಸ ವ್ಯವಸ್ಥೆ ಮಾಡಬೇಕು, ಆ ಇಲಾಖೆಯನ್ನು ದೃಢಪಡಿಸಬೇಕು, ಬಲಿಷ್ಠಪಡಿಸಬೇಕು ಅದನ್ನು ರೀ ಆರ್ಗನೈಸ್ ಮಾಡಬೇಕು ಅದರಲ್ಲಿ ಒಳ್ಳೊಳ್ಳೆಯ ತಜ್ಞರು ಇರಬೇಕು. ಇವೆಲ್ಲದರ ಅನುಕೂಲವನ್ನು ಪಡೆದುಕೊಂಡು ಈ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅಧ್ಯಕ್ಷರೇ, ಸಣ್ಣ ನೀರಾವರಿ ಬಹಳ ಪ್ರಾಮುಖ್ಯವಾದುದು. ಈ ಕೆಲಸದ ಬಗ್ಗೆ ಏನು ಹೇಳಿದರೂ ಅದು ಹಣಕ್ಕೆ ಬರುತ್ತದೆ. ಇನ್ನೆಲ್ಲಾ ನಾವು ಹೇಳಿದ್ದೇವೆ. ಏನೆಂದರೆ ಅಂತರ್ಜಲವನ್ನು ತೆಗೆಯುವ ಕೆಲಸ ಆಗಬೇಕು, ಕೆರೆ ಕೆಲಸ ಆಗಬೇಕು, ಪಿಕಪ್‌ಗಳು ಆಗಬೇಕು, ಲಿಫ್ಟ್ ಇರಿಗೇಷನ್ ಆಗಬೇಕು, ಹೆಚ್ಚು ಸಲಕರಣೆಗಳು ಬೇಕು ಸಿಬ್ಬಂದಿ ಇರಬೇಕು, ಜೊತೆಗೆ ವಿಮರ್ಶೆ ನಡೆಯಬೇಕು, ಹೆಚ್ಚು ಕಡಿಮೆ ಉತ್ತರದಿಂದ ದಕ್ಷಿಣಕ್ಕೆ, ಪೂರ್ವದಿಂದ ಪಶ್ಚಿಮಕ್ಕೆ ಕರ್ನಾಟಕ ರಾಜ್ಯದ ಎಲ್ಲಾ ಭಾಗವನ್ನು ಆಳತೆ ಮಾಡಿಕೊಂಡು ಮಾಡಬೇಕಾದ ಕೆಲಸ ಎಂದು.

4-00 P. M.

ಇದು ಅಷ್ಟು ಒಂದು ದೊಡ್ಡ ಕೆಲಸ. ಈ ದೊಡ್ಡ ಕೆಲಸಕ್ಕೆ ಒಂದು ವರ್ಷದಲ್ಲಿ ೪ ರಿಂದ ೫ ಕೋಟಿ ರೂಪಾಯಿ ಖರ್ಚು ಮಾಡಿದರೆ ಸಾಕೇ ? ಹೊಟ್ಟೆಗೆ ಇದ್ದರೆ ಬಟ್ಟೆಗೆ ಇಲ್ಲ, ಬಟ್ಟೆಗೆ ಇದ್ದರೆ ಹೊಟ್ಟೆಗೆ ಇಲ್ಲ. ಸ್ವಾಭಾವಿಕವಾಗಿ ಮನುಷ್ಯನಿಗೆ ಬೆಳೆಯುವ ಕಾಲದಲ್ಲಿ ಅನ್ನ ಕೊಡದೇ ಹೋದರೆ ಹೊಟ್ಟೆ ದಪ್ಪವಾಗಿ ಕಣ್ಣು ಹೊರಗೆ ಬಂದು ಮುಖದಲ್ಲಿ ಕಳೆ ಇರುವುದಿಲ್ಲ ಮನುಷ್ಯ ತೆವಳುತ್ತಾ ಇರುತ್ತಾನೆ. ಮಕ್ಕಳೂ ಸಹ ದಷ್ಟಪುಷ್ಟವಾಗಿ ಬೆಳೆಯಬೇಕಾದರೆ ಪೌಷ್ಟಿಕ ವಸ್ತುಗಳನ್ನು ಕೊಡಬೇಕಾಗುತ್ತದೆ ಬಹಳ ಜನರ ಮನೆಗಳಲ್ಲಿ ಗರ್ಭಿಣಿ ಹೆಂಗಸರಿಗೆ, ಶಾಲೆಗೆ ಹೋಗುವ ಮಕ್ಕಳಿಗೆ ಪೌಷ್ಟಿಕಾಹಾರ ಇಲ್ಲದೆ ಇದಕ್ಕೆ ಕೊರತೆ ಯಿರುವುದರಿಂದ ನಮ್ಮ ದೇಶದಲ್ಲಿ ರೋಗರುಜಿನಗಳು ಜಾಸ್ತಿ ಇದೆ ಇದನ್ನು ನಾನು ಹೇಳುವುದಿಲ್ಲ ಇದನ್ನು ಪಂಡಿತ ಪಾಮರರು ಹಿಂದಿನಿಂದಲೂ ಹೇಳಿ ಬರೆದುಇಟ್ಟಿದ್ದಾರೆ. ಯಾರು ಯಾರಿಗೆ ಎಷ್ಟು ಆದಾಯ ಬರುತ್ತದೆ, ಅವರ ಆದಾಯದ ಮೇಲೆ ಹೇಗೆ ಜೀವನ ನಡೆಸುತ್ತಾರೆ, ಈ ತರಹ ಜೀವನ ನಡೆಸಿದರೆ ಸ್ವಾಭಾವಿಕವಾಗಿ ೩೦ನೇ ವರ್ಷದಲ್ಲಿ ಸಾವು ಬರುವುದಕ್ಕೆ ಸಾಧ್ಯ ಎಂಬುದೆಲ್ಲವನ್ನೂ ಆಲೋಚನೆ ಮಾಡಿದರೆ ಇವೆಲ್ಲಕ್ಕೂ ಕಾರಣ ಏನೆಂದರೆ ಪೌಷ್ಟಿಕಾಹಾರದ ಕೊರತೆ ಮತ್ತು ಪೌಷ್ಟಿಕಾಹಾರ ಸಿಕ್ಕುವುದಿಲ್ಲ ಎನ್ನುವುದೇ ಮುಖ್ಯವಾಗಿ ಕಾಣುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ನೂರಕ್ಕೆ ೪೫ ಜನ ಬಡತನ ಮತ್ತು ರೋಗದಲ್ಲಿ ನರಳುತ್ತಿದ್ದಾರೆ ಗಾರೆ ಕೆಲಸ ಮಾಡಿ ಜೀವನ ಸಾಗಿಸುತ್ತಾರೆ ಅವರಿಗೆ ಅನ್ನ ಇಲ್ಲ, ಭೂಮಿ ಇಲ್ಲ ಒಂದು ಹೊತ್ತಿಗೆ ಅಕ್ಕಿ ಸಿಕ್ಕಿದರೆ ಮಕ್ಕಳಿಗೆ ಗಂಜಿ ಮಾಡಿ ಹಾಕಿ, ಅವರೂ ತಿನ್ನತಕ್ಕಂಥ ಪರಿಸ್ಥಿತಿ ಇರುತ್ತದೆ. ಸಿನಿಮಾ ನೋಡುವುದಕ್ಕೆ ಅವಕಾಶ ಇರುವುದಿಲ್ಲ ಇವೆಲ್ಲಕ್ಕೂ ಕಾರಣ ನೀರಾವರಿ ಕ್ಷೇತ್ರ ಅಭಿವೃದ್ಧಿ ಆಗದೆ ಇರುವುದು. ಇದು ಅಭಿವೃದ್ಧಿ ಆಗಬೇಕಾದರೆ ನಾವು ಮಾಡತಕ್ಕಂಥ ಕೆಲಸ ಬಹಳ ಇದೆ ನಾನ ಆಗಲೇ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ೧೯೪೯-೫೦ನೇ ಇಸವಿಯಲ್ಲಿ ಎಷ್ಟು ಪ್ರಮಾಣದಲ್ಲಿ ಕೆರೆ, ನೀರಾವರಿ ಸೌಲಭ್ಯ ಇದ್ದು ಈಗ ಎಷ್ಟಾಗಿದೆ ಎಂಬುದನ್ನು ಲೆಕ್ಕ ಹಾಕಿದರೆ ಶೇಕಡ ೭ ರಷ್ಟು ಇದೆ. ೨೫ ವರ್ಷದಲ್ಲಿ ಎಷ್ಟು ಸಾಧ್ಯವಾಯಿತು ? ವರ್ಷೇ ವರ್ಷೇ ೫ರಷ್ಟು ನೀರಾವರಿಯನ್ನಾಗಿ ಮಾಡಿದ್ದರೂ ಈಗ ೩೫ರಷ್ಟು ಆಗುತ್ತಿತ್ತು. ಈಗ ಒಟ್ಟು ೧೪ರಷ್ಟು ಇವೆ. ಇದರಲ್ಲಿ ದೊಡ್ಡ ನೀರಾವರಿ ಮತ್ತು ಸಣ್ಣ ನೀರಾವರಿಗಳು ಸೇರಿವೆ. ಹೀಗಿರುವಾಗ ಆಹಾರವನು ಜಾಸ್ತಿ ಬೆಳೆಯಬೇಕು ಎಂದರೆ ಎಲ್ಲಿಂದ ಬರುತ್ತದೆ. ಈ ನೀರಾವರೀ ಕ್ಷೇತ್ರವನ್ನು ನಿರ್ಲಕ್ಷ್ಯವಾಗಿ ಕಂಡರೆ ಹೊಟ್ಟೆಗೆ ಅನ್ನವಿರುವುದಿಲ್ಲ. ಆದುದರಿಂದ ಈ ಸಣ್ಣ ನೀರಾವರೀ ಯೋಜನೆಯನ್ನು ಸಮಗ್ರವಾಗಿ ರೂಪಿಸಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಗ್ರಾಮವನ್ನು ಬಿಡಬಾರದು. ಪ್ರತಿಯೊಂದು ಗ್ರಾಮವೂ ಕೂಡ ಇದರ ವಿನ್ಯಾಸದಲ್ಲಿ ಸೇರುವಂತೆ ಒಂದು ಸಮಗ್ರವಾದ ಸರ್ವೆ ಮಾಡಿ ಒಂದು ಯೋಜನೆಯನ್ನು ಸಿದ್ಧಮಾಡಿದರೆ ಇದು ಕಾರ್ಯಗತವಾಗುತ್ತದೆ. ಕನಿಷ್ಟಪಕ್ಷ ಒಂದು ವರ್ಷದಲ್ಲಿ ೫೦ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿದರೆ ೧೦ ವರ್ಷದಲ್ಲಿ ಇದು ೫೦೦ ಕೋಟಿ ರೂಪಾಯಿ ಆಗಿ ಆಹಾರದ ಕೊರತೆ ಏನು ಕಾಣುತ್ತಿದೆ ಅದನ್ನು ಸುಲಭವಾಗಿ ನಿವಾರಿಸುವುದಕ್ಕೆ ಸಾಧ್ಯ ಮತ್ತು ಈ ಬಡತನದ ರೋಗವನ್ನು ಅಳಿಸುವುದಕ್ಕೂ ಸಾಧ್ಯ ಇದೆ. ಶೇಕಡ ೮೦ರಷ್ಟು ವ್ಯವಸಾಯಗಾರರು ಅರೆ ಹೊಟ್ಟೆಯಲ್ಲಿ ಇವತ್ತಿನ ದಿವಸ ಬದುಕುತ್ತಿದ್ದಾರೆ ಅವರು ತುಂಬು ಹೊಟ್ಟೆಯಲ್ಲಿ ಬದುಕುವಂತೆ ಮಾಡಬೇಕು. ಶತಮಾನದ ಕಾರ್ಯಕ್ರಮಗಳನ್ನು ತಾವು ಮಾಡುವುದಕ್ಕೆ ಹೋಗುವುದುಬೇಡ. ಈ ಶತಮಾನದಲ್ಲಿ ಕೆಲಸಮಾಡಿ ಪೂರೈಸತಕ್ಕ ಒಂದು ನಿಷ್ಠುರವಾದಂಥ ಮತ್ತು ಸಮಯಬದ್ಧವಾದ ಕಾರ್ಯಕ್ರಮವನ್ನು ಸರ್ಕಾರದವರು ಜಾರಿಗೆ ತರಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† SRI ABDUL SUBHAN.—Mr. Deputy Speaker, while supporting the resolution moved by my friend Sri Puttaswamy regarding the extra allotment of Rs. 10 crores for minor Irrigation for 75-76 I would like to make a few observations. Sir, in the history of man, as you are all well aware, it is his inherent nature to search for food. Man has become agriculturist to find his food As time advanced the civilisation also dawned on man As civilization advances the man has also tried to improve agriculture. As you are all aware for agricultural advancement the water is undoubtedly a very important factor. The agriculture dominated India provides livelihood for nearly 75 per cent of its population and 80 per cent o

the total population has been engaged in this industry. Though 80 per cent of the population is engaged in this sector, they are not in a position to maintain this sector in a scientific way, whereas in USA only about 10 per cent of the total population is engaged in this industry and they not only maintain themselves but also they are supplying their surplus to the developing Nations Though there is contribution of technological services we have not exploited the maximum benefit and we have made use of water resources that is available on hand. We have concentrated more finances towards the development of agriculture and tried to make use of the maximum quantity of water that is available. But still we are not in a position to attain self sufficiency so far as the food is concerned If we have to attain self-sufficiency in regard to food, we have to make use of the modern technology and education in this field and try to exploit the unique features that are available in our Nation. The rural folk are quite ignorant of modern agricultural science, We must educate them in modern technology. Though we are having moderdte rain fall, our percentage of cultivable land is only 12 per cent where as the national per centage is 20. If we try to make use of the water available to the maximum extent, we can convert 25 per cent of the cultivable land for agricultural purposes. Unless and until we do this, we cannot convert the slogan of attaining self sufficiency, so far as food is concerned, into reality. If we want to convert this slogan into a reality we have to make use of the water resources that are available in our State. For making use of the water resources, we have to invest on tanks and digging wells. By doing this, we can contribute five per cent more towards the national per centage of twenty per cent of cultivable land. One important reason why we have to concentrate more on minor irrigation is this. It has been our experience that rain fall is decreasing in the northern portion of Karnataka and it is increasing in the southern portion. The first and foremost reason, in my opinion, for this fall in rain fall is de-forestation. In my last budget speech I had made a reference to this and said that unless and until we concentrate on afforestation, malnad area is going to be converted into maidan area and maidan are will become a desert. So, Government has to invest more funds on afforestation. In the newspapers it has been stated that the monsoon has shifted towards the south and that is one of the reasons why rain fall in mainad is decreasing. Another theory advanced is that the entire pattern of rain fall has drifted towards the south. Unless and until you dig wells and pay attention to tanks you will not be exploiting the natural gift which has been bestowed upon you by Almighty Allah in the form of rain. So, I feel, that to make use of the gift that has been bestowed by Almighty Allah, you must invest more funds on construction of minor tanks and digging wells.

Anorher important reason why we must go for minor irrigation is this. The population of the Universe is enhrnced and by 2000 A.D. the population of the Unvierse in going to be doubled. According to this calculation, the population of India will be 13 million more by 2000 A,D. ie.. by that time, the population of India will be 200 crores You have to plan in such a fashion that we must be in a position to supply foodgrains to a population of 200 crores by 2000 A.D. We must invest more finances and exploit to the maximum, the water resources available in our State. If we fail in attginning self-sufficiency to feed a populatiod of 200 crores, posterity will blame us for not discharging the heavy responsibility cast upon us, So, I feel this is the right time to act. To quench the enormous pangs of hunger, we must invest more funds towards the construction of minor irrigation units, and attain self-sufficiency so far as food is concernedr

With these few words, I will conclude my speech by offering my sincere thanks to the Hon Deputy Speaker for having given me an opportunity to speak.

† ಶ್ರೀ ಪಿ. ಎನ್. ಪಾಟೀಲ್ (ಹುಮ್ನಾಬಾದ್) — ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಜಿ. ಪುಟ್ಟಸ್ವಾಮಿಯವರು ತಂದಿರು ನಿರ್ಣಯಕ್ಕೆ ಬರಿ ಬೆಂಬಲ ಕೊಡುವುದೇ ಅಲ್ಲದೆ, ಈ ಸಣ್ಣ ನೀರಾವರಿಯೋಜನೆಗೆ ಒದಗಿಸಿರತಕ್ಕ ೧೦ ಕೋಟಿ ರೂಪಾಯಿ ಸಾಕಾಗದು ಎಂದು ಹೇಳುತ್ತೇನೆ ಈ ಕ್ಷೇತ್ರಕ್ಕೆ ಸಾಧಾರಣವಾಗಿ ವರ್ಷಕ್ಕೆ ಕನಿಷ್ಟಪಕ್ಷ ೨೦—೨೫ ಕೋಟಿ ರೂಪಾಯಿಗಳನ್ನಾದರೂ ಕೂಡ ಖರ್ಚುಮಾಡಿದರೆ ಮಾತ್ರ ನಮ್ಮದೇಶದಲ್ಲಿ, ಮೈಸೂರು ರಾಜ್ಯದಲ್ಲಿ ಆಗಾಗ್ಗೆ ಬರುತ್ತಿರುವ ಬರಗಾಲವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಬೇರೆ ಬೇರೆ ಹವಾಮಾನಗಳು, ಬೇರೆ ಬೇರೆ ಮಳೆಗಳು, ಬೇರೆ ಬೇರೆ ತರಹದ ಭೂಮಿಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯವಸಾಯ ಮಾಡುವಂತೆ ಕರ್ನಾಟಕ ರಾಜ್ಯದಲ್ಲಿ ಈ ಬಾಬಿಗೋಸ್ಕರ ೨೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಸಾಲದು ಈಗ ಒದಗಿಸಿರುವ ೧೦ ಕೋಟಿ ರೂಪಾಯಿಗಳು ಬೇಡ ಎಂದು ಹೇಳುವುದಿಲ್ಲ. ಆದರೆ, ಇಷ್ಟು ದುಡ್ಡು ಈ ನೀರಾವರಿ ಯೋಜನೆಗೆ ಏತಕ್ಕೆ ಖರ್ಚು ಮಾಡಬೇಕು ಎಂದರೆ, ಅದಕ್ಕೆ ಎರಡು ಮೂರು ಕಾರಣಗಳು ಇವೆ. ಒಂದು ಸತತವಾಗಿ ಕ್ಷಾಮಗಳು ಬರುತ್ತಾ ಇರುವುದು, ಮೂರು ವರ್ಷಗಳಿಗೊಮ್ಮೆ ಮಳೆಯಾಗುವಂತ ಬಿಜಾಪುರ ಜಿಲ್ಲೆ ಇದೆ. ಅಲ್ಲಿ ಬೆಳೆ ಬೆಳೆಯುವುದು ಒಂದು ಸಾರಿ, ಮಳೆ ಒಂದು ಸಾರಿ ಬಂದರೆ ಮತ್ತೆ ಆಕಾಶದ ಕಡೆಗೆ ನೋಡಬೇಕಾಗುತ್ತದೆ. ಇವತ್ತು ನಮ್ಮಲ್ಲಿ ಬರತಕ್ಕ ಕ್ಷಾಮಗಳು ಏನು ಇವೆ, ಇವು ಸ್ವಾಭಾವಿಕವಾಗಿ ಬರುತ್ತಲೇ ಇರುತ್ತವೆ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು ಕಾಡುಗಳನ್ನು ಕಡಿದು ಹಾಕುತ್ತಿದ್ದಾರೆ. ಅರಣ್ಯ ಪ್ರದೇಶವನ್ನು ಸಂರಕ್ಷಣೆ ಮಾಡತಕ್ಕ ಅಧಿಕಾರಿಗಳು ಹಗಲಿರುಳು ಸ್ಮಗಲರ್ ಜೊತೆಯಲ್ಲಿ ಕೂಡಿಕೊಂಡು, ಸಾಧಾರಣವಾಗಿ ಶಸ್ತ್ರಗಳನ್ನು ಉಪಯೋಗಿಸಿಕೊಂಡೇ ಸ್ಮಗಲ್ ಮಾಡುತ್ತಾ ಇರುತ್ತಾರೆ. ದೇವೇಂದ್ರಪ್ಪನವರ ಕ್ಷೇತ್ರವಾದ ಚಿಂಚೋಳಿ ತಾಲ್ಲೂಕಿನ ಒಂದು ಗ್ರಾಮದಲ್ಲಿ, ಆಂಧ್ರ ಮತ್ತು ಕರ್ನಾಟಕದ ಗಡಿಯಲ್ಲಿರತಕ್ಕ ಒಂದು ಗ್ರಾಮದಲ್ಲಿ ಸಾಧಾರಣವಾಗಿ ೧೫೦ ಜನ ಫಾರೆಸ್ಟ್ ಗಾರ್ಡುಗಳ ಮೇಲೆ ಟ್ಯಾಗ್ ಮಾಡಿ, ಒಬ್ಬನ ಪ್ರಾಣ ತೆಗೆದು ೨೦೦ ಬಂಡಿಗಳಲ್ಲಿ ಟೀಕ್‌ವುಡ್‌ಗಳನ್ನು ಸ್ಮಗಲ್ ಮಾಡಲಾಗಿತು, ಹೋದ ವರ್ಷ ಈ ಘಟನೆ ನಡೆಯಿತು. ಅರಣ್ಯ ರಕ್ಷಣೇ ಮಾಡದೇ ಇದ್ದರೆ ಅರಣ್ಯ ಉಳಿಯುವುದಿಲ್ಲ. ಅರಣ್ಯ ಉಳಿಯಂದ ಮೇಲೆ ಮಳೆ ಆಗುವುದಿಲ್ಲ, ಮಳೆ ಆಗದ ಮೇಲೆ ಬರಗಾಲ ಬಂದೇ ಬರುತ್ತದೆ. ಇದು ೧೫–೨೦ ವರ್ಷದಿಂದ ಇದೆ. ನಿಜಾಮರು ಸಹ ಅವರ ಕಾಲದಲ್ಲಿ ಅರಣ್ಯ ಸಂರಕ್ಷಣೆಯ ಬಗ್ಗೆ ಅರಣ್ಯ ನಾಶಮಾಡಿದವನ ಕೊರಳು ಕಡಿದು ಹಾಕುವ ರೂಲ್ ಮಾಡಿದ್ದರು. ಈಗ ಈ ಅರಣ್ಯ ಪ್ರದೇಶದಲ್ಲಿ ಸ್ಮಗಲ್ ಆಗುತ್ತದೆ. ಯಾವುದೇ ಸ್ಮಗಲ್ ಆದರೂ ಕೂಡ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಿಲ್ಲ. ಏತಕ್ಕೆ ಎಂದರೆ ಈಗ ಒಂದು ರೂಲ್ ಮಾಡಿಕೊಂಡು ಬಿಟ್ಟಿದ್ದಾರೆ. ಯಾವ ಅಧಿಕಾರಿ ಯಾವುದೇ ತಪ್ಪು ಮಾಡಿರಲಿ ವಿಚಾರಣೆ ಮಾಡುತ್ತೇವೆ ಎಂದು ಹೇಳುತ್ತಾರೆ.

ಶ್ರೀ ಎಸ್. ಬಿ. ನಗರಾಳ್.—ಮಾನ್ಯ ಸದಸ್ಯರು ಮೈನರ್ ಇರಿಗೇಷನ್ ಮೇಲೆ ಮಾತನಾಡಬೇಕು.

ಶ್ರೀ ಎ. ಎನ್. ಪಾಟೀಲ್.— ಮಾನ್ಯ ಮಂತ್ರಿಗಳು ತಾವು ಜಾಯಿಂಟ್ ರೆಸ್‌ಪಾನ್‌ಸಿಬಿಲಿಟಿ ಇದೆ ಎಂದು ಹೇಳುತ್ತಿದ್ದೇನೆ. ಇವೊತ್ತಿನ ದಿವಸ ಅರಣ್ಯಪ್ರದೇಶ ಕಡಿಮೆ ಆದರೆ ಮಳೆ ಎಲ್ಲಿ ಹೆಚ್ಚು ಬರುತ್ತದೆ. ನಿಮ್ಮ ಅರಣ್ಯ ರಕ್ಷಣೆ ಮಾಡಲಿಕ್ಕೆ ಇದು ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಇದೆ ಎಂದು ಈ ವಿಷಯವಾಗಿ

ಹೇಳುತ್ತಿದ್ದೇನೆ. ಬೇರೆ ವಿಷಯದ ಕಡೆ ಹೋಗುತ್ತಾ ಇಲ್ಲ ಏತಕ್ಕೆಂದರೆ ನಾನು ಈ ಸಭೆಯ ಅಮೂಲ್ಯ ವೇಳೆಯನ್ನು ತೆಗೆದುಕೊಂಡು ಬೇರೆ ವಿಷಯ ಮಾತನಾಡುವುದಿಲ್ಲ. ಈಗ ಅಲಿಗೇಷನ್ ಬಂದ ಅಧಿಕಾರಿಗಳಿಗೆ ಪನಿಷ್ ಮಾಡುವ ಶಕ್ತಿ ಇವರಿಗೆ ಇಲ್ಲ. ಇದರಿಂದ ಏನಾಗುತ್ತದೆ ಎಂದರೆ ಅಧಿಕಾರಿಗಳಿಗೆ ಮಂತ್ರಿಗಳು ಬಂದರು ಹೋದರು ಎನ್ನುವ ಒಂದು ಟೆಂಡೆನ್ಸಿ ಬರುತ್ತದೆ. ಉದಾಹರಣೆಗೆ ಹೇಳುವುದಾದರೆ ನೀರಿನಲ್ಲಿ ಡಿ.ಡಿ.ಟಿ ಬೆರೆತಿದೆ ಎನ್ನುವ ಪ್ರಶ್ನೆ ಕೇಳಿದಾಗ, ಮಾನ್ಯ ಮಂತ್ರಿಗಳು ಅದರ ಬಗ್ಗೆ ರಿಪೋರ್ಟ್ ಬಂದಮೇಲೆ ನೋಡೋಣ ಎಂದು ಹೇಳಿದರು. ಆಕಸ್ಮಾತ್ ಅದರಲ್ಲಿ ಡಿ.ಡಿ.ಟಿ ಬೆರೆತಿದ್ದರೆ, ಇದರಿಂದ ಎಷ್ಟು ಜನರ ಆರೋಗ್ಯ ಸಂಧಾರಿಸಬೇಕಾಗುತ್ತದೆ, ಅಲ್ಲದೇ ಎಷ್ಟು ಜನರಿಗೆ ತೊಂದರೆಯಾಗುತ್ತದೆ ಅದನ್ನೆಲ್ಲಾ ಯೋಚನೆ ಮಾಡಬೇಕು. ಇವೊತ್ತಿನ ದಿವಸ ಅರಣ್ಯವನ್ನು ನಾಶ ಮಾಡುತ್ತಾ ಹೋದರೆ, ನಾಳೆ ನೀರಿನ ಸಮಸ್ಯೆ ಬಹಳ ಕಷ್ಟವಾಗುತ್ತದೆ. ಇವೊತ್ತು ಬಿದರೆ ಡಿಸ್ಟ್ರಿಕ್ಟ್‌ನಲ್ಲಿ ೬೦—೭೦ ಪರ್‌ಸೆಂಟ್ ಬಾವಿಗಳಿಂದ ವ್ಯವಸಾಯ ಮಾಡುತ್ತಾರೆ. ಹಿಂದೆ ಈ ವಾಟರ್ ಟೇಬಲ್ ಎಷ್ಟರವರೆಗೆ ಕೆಳಗೆ ಹೋಗಿತ್ತು ಎಂದರೆ ೨೦ ಅಡಿ ಆಳ ತೆಗೆದರೆ ನೀರು ಬರುತ್ತಾ ಇತ್ತು. ಇವೊತ್ತು ಈ ವಾಟರ್ ಟೇಬಲ್ ತುಂಬಾ ಕೆಳಮಟ್ಟಕ್ಕೆ ಹೋಗಿದೆ. ಈಗ ಈ ಭೂಗರ್ಭ ಶಾಸ್ತ್ರಜ್ಞರು ರಿಪೋರ್ಟ್ ಏನು ಹೇಳುತ್ತಾರೆ ಎಂದರೆ ನಿಮ್ಮ ಜಿಲ್ಲೆಯಲ್ಲಿ ಒಂದಕ್ಕೊಂದಕ್ಕೆ ೬೦೦ ಅಡಿ ಪಕ್ಕದಲ್ಲಿ ಬಾವಿ ತೆಗೆಸಬಾರದು ಎಂದು ಹೇಳುತ್ತಾರೆ. ಇವೊತ್ತು ಸ್ಮಾಲ್ ಫಾರ್‌ಮರ್ಸ್ ಡೆವಲಪ್‌ಮೆಂಟ್ ಏಜೆನ್ಸಿ ಎಂದು ಇದೆ, ಈಗ ಒಬ್ಬ ರೈತನ ಹತ್ತಿರ ೫ ಎಕರೆ ಜಮೀನು ಇರುತ್ತದೆ ಅವನು ಅಲ್ಲಿ ಒಂದು ಬಾವಿ ತೆಗೆಸಿದರೆ ಪಕ್ಕದ ರೈತನ ಜಮೀನು ೫ ಎಕರೆ ಇರುತ್ತದೆ ಆಗ ಆತನು ಬಾವಿ ತೆಗೆಸುವುದಕ್ಕೆ ಆಗುವುದಿಲ್ಲ. ಏತಕ್ಕೆಂದರೆ ೬೦೦ ಅಡಿ ಪಕ್ಕದಲ್ಲಿ ಬಾವಿ ತೆಗೆಸಬಾರದು ಎಂದು ತಿಳಿಸಿರುತ್ತಾರೆ.

Mr. DEPUTY SPEAKER.— The difficulty is only 6 per cent of the rain water, even in the coastal area, is absorbed and then, if there are so many closed-wells, there will be no water in any of the wells. The best way is to conserve it, that is by afforestation, and bunding.

SRI V. N. PATIL.— Unfortunately, this scientific idea is coming from the Chair but the Government sometimes refuse to accept.

MR DEPUTY SPEAKER.— In 1952 the cry was to have as many wells as possible. In 196[illegible] the difficulty was, after having so many wells, there was no water in any of the wells. Everybody start digging deeper and deeper. The tragedy was still more.

ಶ್ರೀ ವಿ. ಎನ್. ಪಾಟೀಲ್.— ಮನುಷ್ಯನಿಗೆ ಸಾಧ್ಯ ಇಲ್ಲದೇ ಇರುವುದು ಯಾವುದು ಇಲ್ಲ ನೇಚರ್ ಮೇಲೆ ಕಂಟ್ರೋಲ್ ಮಾಡುವುದು ಮನುಷ್ಯನ ಕೈಯಲ್ಲಿ ಇದೆ ಈಗ ಹೊಸ ಹೊಸದಾಗಿ ಆಧುನಿಕ ವಿಧಾನಗಳು ಬಂದಿದೆ. ಇವೊತ್ತಿನ ದಿವಸ ಮಲೆನಾಡು ಪ್ರದೇಶದಲ್ಲಿ ಮಳೆ ಹೆಚ್ಚಾಗಿ ಬಂದು ಫ್ಲಡ್ ಬಂದು ಬೇಕಾದಷ್ಟು ನಷ್ಟವಾಗುತ್ತಿದೆ. ಈ ರೀತಿ ನಷ್ಟವಾಗುವುದಕ್ಕೆ ಬಿಡದೆ ಅಲ್ಲಿ ಬಿದ್ದಂಥ ಮಳೆ ನೀರನ್ನು ಚಿಕ್ಕ ಚಿಕ್ಕ ಪ್ರಾಜೆಕ್ಟ್‌ಗಳನ್ನು ಕಟ್ಟಿಕೊಂಡು ಅಲ್ಲಿಗೆ ಬಂದು ಸೇರುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಅಲ್ಲಿ ಬಿದ್ದಂಥ ನೀರನ್ನು ಸ್ಟಾಕು ಮಾಡುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಈ ರೀತಿಯಲ್ಲಿ ಫ್ಲಡ್ ಆಗುವುದಕ್ಕೆ ಬಿಡಬಾರದು ಎಂದು ಹೇಳುತ್ತೇನೆ. ಅಲ್ಲಿಯ ನೀರನ್ನು ತಡೆಹಿಡಿದರೆ ಅದರಿಂದ ಈ ವ್ಯವಸಾಯಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಈಗ ಬಿದರ್, ರಾಯಚೂರ್, ಗುಲ್ಬರ್ಗ, ಹಾಸನ ಜಿಲ್ಲೆಗಳಲ್ಲಿ ಎಲ್ಲಾ ಕಡೆ ಈ ನೀರಿನ ತೊಂದರೆ ಇದೆ. ಅಲ್ಲದೇ ಮಹಾರಾಷ್ಟ್ರದಲ್ಲಿ ಉಸ್ಮಾನ್‌ಬಾದ್ ಕ್ರಾನಿಕಲಿ ಡ್ರಾಟ್ ಏರಿಯಾ ಎಂದು ಹೇಳುತ್ತಿದ್ದರು. ಹಿಂದೆ ಆ ಕಡೆಗಳಿಗೆ ಹೆತ್ತ ತಾಯಂದಿರು ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡುತ್ತಾ ಇರಲಿಲ್ಲ, ಏತಕ್ಕೆಂದರೆ ಅಲ್ಲಿ ಈ ನೀರಿಗೆ ಸುಮಾರು ಎರಡು ಮೈಲಿ, ಮೂರು ಮೈಲಿ ಹೋಗಬೇಕಾಗುತ್ತಿತ್ತು. ಒಂದೊಂದು ಪಿಕ್ ಅಪ್ ಅಷ್ಟಷ್ಟು ದೂರ ಕಟ್ಟಿಸಿದ್ದಾರೆ. Minor Irrigation is very important because the weaker sections in the society are not permitted to take water and they will have to go miles together to fetch water.

ಇವೊತ್ತಿನ ಸಿಚ್ಯುಯೇಷನ್ ಆಶೀತಿ ಇದೆ ಮೂರು ಮೈಲಿಗೆ, ಎರಡು ಮೈಲಿಗೆ ಒಂದೊಂದು ಪಿಕ್‌ಅಪ್ ಕಟ್ಟಿಸಿದ್ದಾರೆ. ಇದರಿಂದ ವಾಟರ್ ಟೇಬಲ್ ಇನ್‌ಕ್ರೀಸ್ ಆಯಿತು. ಆದರೆ ಕುಡಿಯುವ ನೀರು ಸಿಕ್ಕುತ್ತದೆ, ಇರಿಗೇಷನ್ ಸಲುವಾಗಿ ನೀರು ಸಿಕ್ಕುತ್ತದೆ. ಲ್ಯಾಂಡ ಫರ್ಟಿಲಿಟಿ ಹೋಗುತ್ತದೆ. ಮೊದಲು 0 ಕ್ವಿಂಟೋಲ್ ಬೆಳೆಯುತಕ್ಕ ಕಡೆ ಇವೊತ್ತು ಅರ್ಧ ಕ್ವಿಂಟೋಲ್ ಆಗುತ್ತಾ ಇಲ್ಲ. ಇವೊತ್ತು ಪಾಪ್ಯುಲೇಷನ್ ವಿಚಾರ ಮಾಡೋಣ ಅದು ಡಬ್ಬಲ್ ಆಗಿದೆ. ಇದ್ದ ಪಾಪ್ಯುಲೇಷನ್‌ಗೆ ಈಗಿರತಕ್ಕ ಕಂಡೀಷನ್‌ನಲ್ಲಿ ಸಾಕಷ್ಟು ಆಹಾರ ಕೊಡುವುದಕ್ಕೆ ಸಾಧ್ಯತೆ ಇಲ್ಲ ಎಂದಮೇಲೆ ಸಿನ್‌ಸಿಯರ್ ಆಗಿ ಎಫರ್ಟ್ ಆಗುತ್ತಾ ಇಲ್ಲ ಎಂದು ಹೇಳಬೇಕಾಗಿದೆ. ಇದರ ಬಗ್ಗೆ ಕ್ಯಾಬಿನೆಟ್ ನಿಗಾ ಕೊಡುವುದಿಲ್ಲ. ಏತಕ್ಕೆಂದರೆ ಕೋಟ್ಯಾಂತರ ರೂಪಾಯಿ ಕೊಡಬೇಕಾಗುತ್ತದೆ. ಈಗ ಪಾರ್ಟಿಯಲ್ಲಿ ಡಿಸಿಪ್ಲಿನ್ ಇರುತ್ತದೆ, ಕಟ್ಟುನಿಟ್ಟುಗಳು ಇರುತ್ತವೆ, ಆದರೂ ಸಹ ಮೈನರ್ ಇರಿಗೇಷನ್ ರಾಜ್ಯದಲ್ಲಿ ಹಿಂದುಳಿದಿರುವುದರಿಂದ ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇವೊತ್ತಿನ ದಿವಸ ಇಷ್ಟು ಪ್ರಾಮುಖ್ಯವಾದಂಥ ಒಂದು ಮೈನರ್ ಇರಿಗೇಷನ್ ಪೋರ್ಟ್ ಫೋಲಿಯೋವನ್ನು ಮಿನಿಸ್ಟರ್ ಆಫ್ ಸ್ಟೇಟ್ ಎಂದು ಕೊಟ್ಟುಬಿಟ್ಟರೆ, ಕ್ಯಾಬಿನೆಟ್‌ನಲ್ಲಿ ಡಿಸ್‌ಕಷನ್ ಆಗುವುದಕ್ಕೆ ಸಾಧ್ಯವಾಗುವುದಿಲ್ಲ ಈಗ ಕ್ಷಾಮ ಬಂದ ಪ್ರದೇಶಗಳಲ್ಲಿ ಕೆಲವು ಕೆರೆಗಳನ್ನು ಕಟ್ಟಿಸಿರಬಹುದು, ಅಲ್ಲದೇ ಮಾನ್ಯ ಮಂತ್ರಿಗಳು ಕ್ಷಾಮ ಪ್ರದೇಶಕ್ಕೆ ನಾಲ್ಕೈದು ಸಾರಿ ಬಂದಿದ್ದರು. ಆದರಿಂದ ಅವರಿಗೆ ಅಲ್ಲಿಯ ಸ್ಥಿತಿಗತಿಗಳು ಗೊತ್ತಿದೆ. ಕ್ಷಾಮ ಭಾಗವಾದಂಥ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಹೆಚ್ಚು ಹಣ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇವೊತ್ತಿನ ದಿವಸ ಸರ್ಕಾರದಿಂದ ಎಷ್ಟು ಹಣ ಕೈಬಿಟ್ಟು ಹೋಗಿದೆ, ನಿಜವಾಗಿ ಆದರಿಂದ ಯುಟಿಲಿಟಿ ಎಷ್ಟು ಆಗಿದೆ. ಮೈನರ್ ಇರಿಗೇಷನ್ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ತೆಗೆದುಕೊಂಡಿದ್ದರೂ ಇದುವರೆಗೂ ಒಂದೂ ಕಂಪ್ಲೀಟ್ ಆಗಿಲ್ಲ. ಈ ಮೈನರ್ ಇರಿಗೇಷನ್‌ಗೋಸ್ಕರ ೬೫ ಕೋಟಿ ರೂಪಾಯಿ ಖರ್ಚುಮಾಡಿದರೆ ಅದರ ಪ್ರಯೋಜನ ಏನು ಅಲ್ಲಿಯ ಪ್ರೊಡಕ್ಟಿವಿಟಿ ಇನ್‌ಕ್ರೀಸ್ ಆಗಿಲ್ಲ ಅಲ್ಲದೇ ಮೈನರ್ ಇರಿಗೇಷನ್ ಎಷ್ಟೆಷ್ಟು ತೆಗೆದುಕೊಂಡರು, ಸರ್ಕಾರದಲ್ಲಿ ದುಡ್ಡು ಇಲ್ಲ ಎಂದು ಪ್ರಾಜೆಕ್ಟ್‌ಗಳು ಕೈಬಿಟ್ಟು ಹೋಗುತ್ತಾ ಇದೆ. ನಮ್ಮ ಭಾಗಕ್ಕೆ ೬೫ ಕೋಟಿ ರೂಪಾಯಿ ನಾವು ಖರ್ಚು ಮಾಡಿದ್ದೇವೆ ಎಂದು ಪ್ರತಿಯೊಂದು ಸಾರಿ ನಮ್ಮ ಮುಖಕ್ಕೆ ಹೇಳುತ್ತಾ ಹೋದರೆ ಆ ಭಾಗದಿಂದ ಬಂದವರು ಸೆಕೆಂಡ್ ಕ್ಲಾಸ್ ಸಿಟಿಜನ್ ಆಗಿದ್ದೇವೆ ಎಂದಹಾಗಾಗುತ್ತದೆ. ತಾವು ಆ ರೀತಿ ಹೇಳಿಕೊಂಡು ಹೋದರೆ ನಾವು ಕೇಳುವುದಕ್ಕೆ ಕುಳಿತಿದ್ದೇವೆಯೇನು? ೬೫ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳುವುದನ್ನಾದರೂ ಇನ್ನುಮುಂದೆ ಬಿಟ್ಟುಬಿಡಿ. Not even one project in Bidar, Gulbarga and Raichur Districts under minor irrigation has been completed. ಪ್ರಾಜೆಕ್ಟ್ ಕಂಪ್ಲೀಟ್ ಮಾಡದೆ ಇನ್ಯಾಗುರೇಷನ್‌ಗೆ ಮಾತ್ರ ಮಂತ್ರಿಗಳು ಬಂದುಹೋದರೆ it is unbecoming of our socialism. ಕನ್‌ಸ್ಟ್ರಕ್ಟೀವ್ ಕ್ರಿಟಿಸಿಸಂ ಮಾಡಬೇಕಾದರೆ ತಾವು ಯಾವ ಪ್ರಾಜೆಕ್ಟ್ ತೆಗೆದುಕೊಂಡಿದ್ದೀರಿ ಆ ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಬೇಕು ಎಂದು ಹೇಳುತ್ತೇನೆ. ಒಂದು ತಾಲ್ಲೂಕಿಗೆ ಒಂದು ಪ್ರಾಜೆಕ್ಟ್ ಕಂಪ್ಲೀಟ್ ಮಾಡಿದರೆ ಎರಡನೆ ಪ್ರಾಜೆಕ್ಟ್ ಕೈಗೊಳ್ಳುತ್ತೇವೆ ಎಂದು ಮಾಡಿ. ಮೈನರ್ ಇರಿಗೇಷನ್ ಪ್ರಾಜೆಕ್ಟ್ ಡಿವಿಜನನ್ನು ಎಲ್ಲಿ ಇಟ್ಟಿದ್ದೀರಾ? ರಾಯಚೂರಿನಲ್ಲಿ ಇಟ್ಟಿದ್ದೀರಿ. ಬೀದರ್, ಬಾಲ್ಕಿ ಅಥವಾ ಹುಮ್ನಾಬಾದ್ ತಾಲ್ಲೂಕಿಗೆ ಒಂದು ಕೆರೆ ಆಗುವ ಸ್ಥಳವನ್ನು ನೋಡುವುದಕ್ಕೂ ಕೂಡ ಇನ್‌ವೆಸ್ಟಿಗೇಷನ್ ಆಫೀಸರಿಗೆ ಪುರಸೊತ್ತು ಇರುವುದಿಲ್ಲ. ರೈತರು ತಾವಾಗಿಯೇ ಕರೆದುಕೊಂಡುಹೋಗಿ ಇಂಥ ಕಡೆ ಕೆರೆಗಳಿಗೆ ಸೈಟು ಇದೆ. ಅಲ್ಲಿ ಸಣ್ಣ ಕೆರೆ ಆಗಬಹುದು ಎಂದು ತೋರಿಸಿದರೂ ಅದನ್ನು ನೋಡುವುದಕ್ಕೆ ಕೂಡ ಯಾರೂ ಇಲ್ಲ. ರಾಯಚೂರಿನಲ್ಲಿ ಅಧಿಕಾರಿಗಳಿಗೆ ಕೇಳಿದ್ದಕ್ಕೆ ಮೈನರ್ ಇರಿಗೇಷನ್ ಮಿನಿಸ್ಟರ್ ಬರುತ್ತಾರೆ ಎಂದು ಹೇಳುತ್ತಾರೆ. ಇಷ್ಟು ಇರಿಗೇಷನ್ ಪ್ರಾಜೆಕ್ಟ್ ಇನ್‌ವೆಸ್ಟಿಗೇಷನ್ ಮಾಡಬೇಕೆಂದು ಅವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟರೆ ಅವರು ಅದನ್ನು ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ರೆಡಿ ಇದ್ದಾರೆ. ನಾವು ಪಿಟಿಷನ್ ಕೊಡುತ್ತಾ ಇದ್ದರೆ, ರೈತರ ಗತಿ ಏನು? ಒಂದು ಮೈನರ್ ಇರಿಗೇಷನ್ ಪೂರ್ತಿ ಮಾಡದೇ ಇದ್ದರೆ ಆ ಭಾಗದ ಗತಿ ಏನಾಗಬಹುದು. ಇದಕ್ಕೆ ಹೊಣೆಗಾರರು ಯಾರು?

4-30 P.M.

ಮಾನ್ಯ ಮಂತ್ರಿಗಳಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ, ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಮೈನರ್ ಇರಿಗೇಷನ್‌ಗೆ ಎಷ್ಟು ಹಣ ಅಲಾಟ್ ಮಾಡಿದ್ದೀರೋ ಈ ವರ್ಷ ಅದರ ಅರ್ಧ ಕೂಡ ಅಲಾಟ್ ಮಾಡಿಲ್ಲ. ಇದನ್ನು ಕಂಪ್ಲೀಟಾಗಿ ನೆಗೆಟ್ ಮಾಡಿದೆ ಎರಡನೆಯದು, ಅಲಾಟ್‌ಮೆಂಟ್ ಬಗ್ಗೆ ಡೆಫನೆಟ್ ಪಾಲಿಸಿ ಇರಬೇಕಾಗುತ್ತದೆ. ಬರೇ ಅಲಾಟ್ಮೆಂಟ್ ಮಾಡಿ ಫಂಡ್ಸ್ ಯುಟಿಲೈಸ್ ಮಾಡದೆ ಬಿಟ್ಟರೆ

ಪ್ರಯೋಜನವಿಲ್ಲ. ನನ್ನ ಮಾನ್ಯ ಮಿತ್ರರಾದ ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ ಒಂದು ಫಿಕ್ಸ್‌ಡ್ ಪ್ರೋಗ್ರಾಂ ಇಟ್ಟುಕೊಂಡು ಪ್ರತಿಯೊಂದು ತಾಲ್ಲೂಕಿನಲ್ಲಿ ಹೊಸ ಮೈನರ್ ಇರಿಗೇಷನ್ ಸೈಟುಗಳು ಎಷ್ಟೆಷ್ಟು ಇವೆ, ಪ್ರಯಾರಿಟಿ ಯಾವಯಾವುದಕ್ಕೆ ಕೊಡಬಹುದು, ಇಷ್ಟು ಟೈಂನಲ್ಲಿ ಮುಗಿಸದೇ ಇದ್ದರೆ ಅದು ಲೋಕಲ್ ಅಧಿಕಾರಿಗಳ ಹೊಣೆ ಎಂದು ಸ್ಟ್ರಿಕ್ಟಾಗಿ ಆರ್ಡರ್ ಹೊರಡಿಸಿ ಆ ತರಹ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ತಯಾರಿದ್ದರೆ ಮಾತ್ರ ಏರಿಯಾದಲ್ಲಿ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಆಗುತ್ತದೆ ಈಗ ಗ್ರೀನ್ ರೆವೆಲ್ಯೂಷನ್ ಆಗುತ್ತಿಲ್ಲ ವೆಸೆಂಟ್ರಿಗೆ ನಿಮ್ಮಲ್ಲಿ ವಿಶ್ವಾಸ ಹೇಗೆ ಇರಬೇಕು? ಹತ್ತು ಕೆರೆಗಳು ಕೇಳಿದರೆ ಒಂದು ಕೆರೆ ಕೂಡ ಕಟ್ಟದೆ ಇದ್ದು ಕೆರೆಗಳ ರಿಪೇರಿ ಮಾಡದೇ ಇದ್ದರೆ ಗ್ರೀನ್ ರೆವೆಲ್ಯೂಷನ್ ಹೇಗೆ ಬರುತ್ತದೆ. ಅದು ಪೀಪಲ್ಸ್ ರೆವೆಲ್ಯೂಷನ್ ಆಗುವುದಿಲ್ಲ. ವೆಸ್ಟೆಡ್ ಇಂಟರೆಸ್ಟ್ ಪ್ರಮೋಟ್ ಮಾಡಿದಂಥ ರೆವೆಲ್ಯೂಷನ್ ಆಗುತ್ತದೆ. ಅವರ ಕೈಗೊಂಬೆಗಳಾಗಿಬಿಡುತ್ತಾರೆ. ಅಲ್ಲಿ ಹೆಚ್ಚು ನೀರು ತರುವುದಕ್ಕೆ ಸಾಧ್ಯವಿರುವ ಎರಡು ಇನ್‌ಸ್ಟನ್‌ಸಸ್ ಕೊಡುತ್ತೇನೆ. ಒಂದು ಚಾಂಗ್ಲಾರ್ ಎಂದು ಹುಮನಾಬಾದ್ ತಾಲ್ಲೂಕಿನಲ್ಲಿ ಇರಿಗೇಷನ್ ಸೈಟ್ ಇದೆ. ಇನ್ನೊಂದು ನೀರಿಗೆರಿ ವಿಠ್ಠಲಪುರ ಎಂದು ಹೇಳಿ ಇದೆ. ಅಲ್ಲಿ ಮೈನರ್ ಇರಿಗೇಷನ್ ಪ್ರಾಜೆಕ್ಟ್ ಇನ್‌ವೆಸ್ಟಿಗೇಟಾಗಿ ಅದು ನಮ್ಮ ರಾಯಚೂರು ಆಫೀಸರ್ ಟೇಬಲ್ ಮೇಲೆ ಬಿದ್ದಿದೆ. ಇಲ್ಲಿ ವೆಸ್ಟೆಡ್ ಇಂಟರೆಸ್ಟ್ ಹೇಗೆ ಕೆಲಸ ಮಾಡುತ್ತಾರೆ ಎಂದ ನೋಡಬಹುದು. ಇಲ್ಲಿ ಸಾಧಾರಣವಾಗಿ ಎರಡು ಸಾವಿರ ಎಕರೆಗೆ ನೀರು ಉಣ್ಣಿಸುವಂಥ ಪ್ರಾಜೆಕ್ಟ್ ಆಗುತ್ತದೆ ಎಂದು ಎಕ್ಸ್‌ಪರ್ಟ್ ರಿಪೋರ್ಟ್ ಇದೆ. ಆದರೆ ಈ ಪ್ರಾಜೆಕ್ಟ್ ಇದ್ದರೆ ಶ್ರೀಮಂತರ ಭೂಮಿ ಹೋಗುತ್ತದೆ ಎಂದು ಪ್ರಾಜೆಕ್ಟ್ ಇನ್‌ವೆಸ್ಟಿಗೇಟ್ ಮಾಡಿದ ಅಧಿಕಾರಿಗಳಿಗೆ ಸುಮ್ಮನೆ ಇದ್ದುಬಿಡಿ ಕೆಳಗೆ ನೀರು ಉಣ್ಣಿಸುವುದಕ್ಕೆ ಭೂಮಿ ಇಲ್ಲ ಎಂಬುದಾಗಿ ಹೇಳಿ ಎಂದು ಅವರುಬಂದಾಗ ೧೫, ೨೦ ಸಾವಿರ ಕೊಟ್ಟು ಕಳುಹಿಸುತ್ತಾರೆ. ಆಗ ಶಿವರ್ಷ ಆ ಪ್ರಾಜೆಕ್ಟ್ ಕೋಲ್ಡ್ ಸ್ಟೋರೇಜ್‌ನಲ್ಲಿ ಬಿದ್ದುಬಿಡುತ್ತದೆ ಇದಕ್ಕೆ ನಾನು ತಮ್ಮಲ್ಲಿ ಹೇಳುತ್ತೇನೆ, ಎರಡು ಸೈಟುಗಳು ಇವೆಯೆಂದು ಎಕ್ಸ್‌ಪರ್ಟ್ಸ್ ಒಪೀನಿಯನ್ ಕೊಟ್ಟರೂ ಕೂಡ ಇವತ್ತು ಡಿಸ್ಟ್ರಿಕ್ ಡೆವೆಲಪ್ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಅದು ಅಪ್ರೂವ್ ಆಗಿದ್ದರೂ ಕೂಡ ಚೀಫ್ ಮಿನಿಸ್ಟರ್ ಮತ್ತು ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ this is in the anproved bill ಎಂದು ಹೇಳಿದರೂ ಕೂಡ ಶ್ರೀಮಂತ ರೈತರು ಏನಿದ್ದಾರೆ ಅವರು ೨೦–೪೦–೫೦ ಎಕರೆ ಭೂಮಿ ಕಳೆದುಕೊಳ್ಳುತ್ತಾರೆಂದು ಅಧಿಕಾರಿಗಳು ದುಡ್ಡು ತಿಂದು ಅದನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಹಾಕಿಬಿಟ್ಟಿದ್ದಾರೆ. ಹೀಗಾದರೆ ಮೈನರ್ ಇರಿಗೇಷನ್ ಪ್ರಾಜೆಕ್ಟ್ ಆಗುವುದಾದರೂ ಹೇಗೆ? ಅಧಿಕಾರಿಗಳ ಮೇಲೆ ಕಂಟ್ರೋಲ್ ಇಲ್ಲ. ಅಲ್ಲಿನ ರೈತರು ನೂರು ಸಾರಿ ಪಿಟಿಷನ್ ಕೊಟ್ಟಿದ್ದಾರೆ. ಆ ಕಾಪಿಗಳನ್ನು ನಾನು ತಮಗೆ ಕಳುಹಿಸುತ್ತೇನೆ ಸ್ಯಾಂಕ್ಷನ್ ಆದ ಪ್ರಾಜೆಕ್ಟ್‌ಗಳು ಕೋಲ್ಡ್ ಸ್ಟೋರೇಜ್‌ನಲ್ಲಿ ಹಾಕಿಬಿಟ್ಟು ಸೈಟ್ ಛೇಂಜ್ ಮಾಡುವ ಪ್ರಯತ್ನ ನಡೆಯುತ್ತದೆ. ಸರ್ಕಾರದವರು ಡಿಸಿಷನ್ ತೆಗೆದುಕೊಳ್ಳುತ್ತಾರೆ. ಪ್ರಾಜೆಕ್ಟ್ ಸ್ಯಾಂಕ್ಷನ್ ಮಾಡುತ್ತಾರೆ. ಕೆಲಸ ನಡೆಯುವುದಿಲ್ಲ. ನಾಳೆ ಜೆ.ಪಿ. ರೆವೆಲ್ಯೂಷನ್ ಬಂದರೆ ದೊಡ್ಡ ಬಾವುಟ ಈ ಶ್ರೀಮಂತರ ಕೈಯಲ್ಲಿಯೇ ಇರುತ್ತದೆ. ೨೦ ವರ್ಷದಿಂದ ಕರೆ ಕೊಡಲಿಲ್ಲ ಎಂದು ಅವರು ಕೊಡುತ್ತಾರೆ. ಇಂತಹ ಒಳಸಂಚು ನಡೆಯುತ್ತದೆ. ಆದುದರಿಂದ ಬೇಗಬೇಗ ಪ್ರತಿಯೊಂದು ತಾಲೂಕಿನಲ್ಲಿ ಇಂತಹ ಕೆರೆಗಳನ್ನು ಕಟ್ಟಬೇಕು. ಎಲೆಕ್ಷನ್ ಸ್ಟಂಟಿಗೋಸ್ಕರ ಕೆರೆಗಳನ್ನು ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುವುದರಿಂದ ಅಲ್ಲಿಯ ಆರ್ಥಿಕ ಸ್ಥಿತಿ ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಕೆರೆಗಳನು ಕಟ್ಟಿದರೆ ಅಲ್ಲಿರುವ ರೈತರಿಗೆ ಕುಡಿಯುವುದಕ್ಕೆ ನೀರು ಸಿಗುತ್ತದೆ, ಬೆಳೆ ಬೆಳೆಯುತ್ತಾರೆ. ನಮ್ಮ ಜಿಯೊಲಜಿಸ್ಟ್‌ಗಳು ಅಲ್ಲಿಗೆ ಬಂದು ಸರ್ವೆ ಮಾಡಿ ಯಾವ ಭಾಗದಲ್ಲಿ ನೀರು ಸಿಗುವುದಿಲ್ಲವೆಂದು ಹೇಳಿದ್ದರೋ ಅಂತಹ ಭಾಗದಲ್ಲಿಯೇ ಇಂದು ಕೊಳವೆ ಬಾವಿಗಳ ಮೂಲಕ ಗಂಟೆಗೆ ೨೫ ಸಾವಿರ ಗ್ಯಾಲನ್ ಬರುತ್ತಿದೆ. ಗುಲ್ಬರ್ಗ ಮತ್ತು ಬೀದರ್ ಮಧ್ಯೆ ಹೋಗುವಾಗ ಮಧ್ಯದಲ್ಲಿ ಸಿಗುವಂತಹ ಹಳ್ಳಿಖೇಡ ಎಂಬ ಗ್ರಾಮದಲ್ಲಿ ಈ ರೀತಿ ನೀರು ಬರುತ್ತಿರುವುದನ್ನು ತಾವು ಹೋಗಿ ನೋಡಬಹುದು ; ಈ ನೀರಿನಿಂದ ೫ ಸಾವಿರ ಎಕರೆ ಪ್ರದೇಶವನ್ನು ಸಾಗುವಳಿ ಮಾಡಬಹುದೆಂದು ಅಲ್ಲಿಯ ಅಧಿಕಾರಿಗಳು ಹೇಳುತ್ತಿದ್ದಾರೆ. ಈ ಹಳ್ಳಿಗೆ ಒಂದು ಮೈಲಿ ದೂರದಲ್ಲಿ ವಾಡಿ ಎಂಬ ಗ್ರಾಮವಿದೆ. ಅಲ್ಲಿಯೂ ಸಹ ನೀರು ಸಾಕಷ್ಟು ಕೊಳವೆ ಬಾವಿಯಿಂದ ಬರುತ್ತಿದೆ. ಈ ನೀರನ್ನು ಕುಡಿಯುವುದಕ್ಕೆ ಮತ್ತು ವ್ಯವಸಾಯ ಮಾಡಲು ಉಪಯೋಗ ಮಾಡಬಹುದು. ಈ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ವಿಭಾಗಾಧಿಕಾರಿಯವರಿಗೆ ಹೇಳಿದರೆ, ಅದು ನನ್ನ ಕಕ್ಷೆಯಲ್ಲಿ ಬರುವುದಿಲ್ಲವೆಂದು ಹೇಳುತ್ತಾರೆ ; ಜಿಲ್ಲಾಧಿಕಾರಿಯವರಿಗೆ ಹೇಳಿದರೆ ಅದು ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್‌ಗೆ ಸಂಬಂಧಪಟ್ಟಿದ್ದು ಎಂದು ಹೇಳಿ ತಮ್ಮ ಒಂದು ಜವಾಬ್ದಾರಿಯನ್ನು ಇನ್ನೊಬ್ಬರ ಮೇಲೆ ಶಿಫ್ಟ್ ಮಾಡುವುದರಲ್ಲಿ ಈ ಅಧಿಕಾರಿಗಳು ಎಕ್ಸ್‌ಪರ್ಟ್ ಆಗಿದ್ದಾರೆಯೇ ಹೊರತು ತಮ್ಮ ಜವಾಬ್ದಾರಿಯನ್ನು ಹಂಚಿಕೊಂಡು ಕೆಲಸ ಮಾಡುತ್ತಿಲ್ಲ ; ತಮ್ಮ ಜವಾಬ್ದಾರಿಯನ್ನು ಹಂಚಿಕೊಂಡು ಈ ಅಧಿಕಾರಿಗಳು ಕೆಲಸ ಮಾಡಿದ್ದೇ ಆದರೆ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಹೆಚ್ಚು ಮಾಡಬಹುದೇ ಅಲ್ಲದೆ, ಜನರಲ್ಲಿ ಒಂದು ರೀತಿಯ ಕಾನ್‌ಫಿಡೆನ್ಸ್‌ನ್ನು ಕ್ರಿಯೇಟ್ ಮಾಡಬಹುದು. ಅದಕ್ಕಾಗಿಯೇ ನಾನು ಕಾಂಕ್ರೀಟ್ ಆಗಿ ಉದಾಹರಣೆಗಳನ್ನು ಕೊಟ್ಟು ಹೇಳುತ್ತಿದ್ದೇನೆ. ಇಂದು

ಸರ್ಕಾರದವರು ೨೦೦ ಅಥವಾ ೪೦೦ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಸಣ್ಣ ನೀರಾವರಿ ಯೋಜನೆಗಳನ್ನು ಕೈಕೊಂಡರೆ ೧೫ ಅಥವಾ ೨೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ. ಆದರೆ ಅಷ್ಟೇ ಎಕರೆ ಪ್ರದೇಶಗಳಿಗೆ ಕೊಳವೆ ಬಾವಿಗಳ ಮೂಲಕ ನೀರನ್ನು ಒದಗಿಸಲು ಹತ್ತನೇ ಒಂದು ಭಾಗದಷ್ಟು ಹಣ ಖರ್ಚು ಮಾಡಿದರೆ ಸಾಕಾಗುತ್ತದೆ. ಇಂತಹ ಒಂದು ಅವಕಾಶವಿದ್ದರೂ ಸಹ ಸರ್ಕಾರದವರು ಅದರ ಕಡೆಗೆ ಗಮನ ಕೊಡುತ್ತಿಲ್ಲ ; ಈಗ ಸರ್ಕಾರದವರು ಸಣ್ಣ ನೀರಾವರಿ ಯೋಜನೆಗಳಿಗಾಗಿ ವರ್ಷಕ್ಕೆ ಕೇವಲ ೨ ಕೋಟಿ ರೂಪಾಯಿಗಳನ್ನು ಮಂಜೂರು ಮಾಡುತ್ತಿದ್ದಾರೆ. ಈ ಹಣ ಆ ಯೋಜನೆಗಳನ್ನು ಉದ್ಘಾಟನೆ ಮಾಡಲು ಮತ್ತು ಮಂತ್ರಿಗಳಿಗೆ ಹೂವಿನ ಮಾಲೆ ಹಾಕಲು ಸಾಕಾಗುವುದಿಲ್ಲವೆಂದು ಹೇಳುತ್ತೇನೆ. ಆದಕ್ಕಾಗಿ ೧೫-೨೦ ಕೋಟಿ ರೂಪಾಯಿಗಳನ್ನಾದರೂ ಇದಕ್ಕಾಗಿ ಮಂಜೂರು ಮಾಡುವುದು ಅವಶ್ಯಕವೆಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿರತಕ್ಕಂಥ ಜಮೀನುಗಳಿಗೆ ಹೆಚ್ಚು ಹೆಚ್ಚು ನೀರಾವರಿ ಸೌಲಭ್ಯ ಕಲ್ಪಿಸಿಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದ್ದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸಹ ವರ್ಷದಲ್ಲಿ ಎರಡಾದರೂ ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಮುಗಿಸಬೇಕೆಂದು ಹೇಳುತ್ತೇನೆ. ಮತ್ತು ಈಗ ಕೈಕೊಂಡಿರುವ ಯೋಜನೆಗಳನ್ನು ಈ ವರ್ಷವೇ ಮಾಡಿ ಮುಗಿಸುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಈಗ ನಮ್ಮ ಮುಂದಿರುವ ನಿರ್ಣಯದಲ್ಲಿ ೧೦ ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಕೇಳಲಾಗಿದೆ. ಅದರ ಬದಲು ೨೦ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಅಲಾಟ್ ಮಾಡಿದರೆ ನಮ್ಮ ಕರ್ನಾಟಕ ರಾಜ್ಯದ ಭೂಪಟವೇ ಬದಲಾವಣೆಯಾಗುತ್ತದೆಂದು ಹೇಳುತ್ತೇನೆ ಹಸಿರುಕ್ರಾಂತಿಯಲ್ಲಿ ಇಂದು ಪಂಜಾಬ್ ರಾಜ್ಯ ಮೊದಲನೇ ಸ್ಥಾನವನ್ನು ಗಳಿಸಿದೆ. ನಾವೂ ಸಹ ಹೆಚ್ಚು ಹಣವನ್ನು ಇದಕ್ಕೆ ಖರ್ಚು ಮಾಡಿದರೆ ಎರಡನೇ ಸ್ಥಾನಕ್ಕೆ ಬರಬಹುದೆಂದು ನಾನು ಹೇಳುತ್ತೇನೆ.

Unfortunately manmade casualities are there ; they will have to be removed

With these few words, I thank the chair and conclude my speech.

† ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಸ್ವಾಮಿಯವರು ತಂದಿರತಕ್ಕಂಥ ಈ ನಿರ್ಣಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಣ್ಣ ನೀರಾವರಿ ಕಾರ್ಯಕ್ರಮಗಳಿಗೆ ಹತ್ತು ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಅವರು ಒಂದು ರೀತಿಯ ದಾಕ್ಷಿಣ್ಯ ಮಾಡಿಕೊಂಡು ಈ ನಿರ್ಣಯ ತಂದಿದ್ದಾರೆ. ನಮ್ಮ ಇಡೀ ಸಂಸ್ಥಾನಕ್ಕೆ ಈ ಹತ್ತು ಕೋಟಿ ರೂಪಾಯಿಗಳು ಯಾವ ಮೂಲೆಗೂ ಸಾಕಾಗುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಇದೇ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒಂದು ಅರಿಕೆ ಮಾಡಿಕೊಳ್ಳುತ್ತೇನೆ ; ಏನೆಂದರೆ, ಇಂತಹ ಖಾಸಗೀ ನಿರ್ಣಯಗಳು ಬಂದಾಗ, ಎಲ್ಲ ಸದಸ್ಯರೂ ಅದನ್ನು ಬೆಂಬಲಿಸಿದರೆ, ಮತ್ತು ಒಂದೇ ನಿಲುವಿನ ಅಭಿಪ್ರಾಯಕ್ಕೆ ಬಂದರೆ, ಅಂತಹ ನಿರ್ಣಯಗಳನ್ನು ಸರ್ಕಾರದವರು ಒಪ್ಪಿಕೊಳ್ಳತಕ್ಕಂಥ ಒಂದು ಉದಾರತೆಯನ್ನು ತೋರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ಈಗ ಏನಾಗುತ್ತಿದೆ ಎಂದರೆ, ಕೆಲವು ಖಾಸಗೀ ನಿರ್ಣಯಗಳಿಗೆ ಯಾರ ವಿರೋಧವೂ ಇರುವುದಿಲ್ಲ, ಎಲ್ಲರೂ ಒಪ್ಪುತ್ತಾರೆ, ಅದರೂ ಸಹ ಅಂತಹ ನಿರ್ಣಯವನ್ನು ಸರ್ಕಾರ ಒಪ್ಪುವುದಿಲ್ಲ ; ನಂತರ ಪಕ್ಷದ ದೃಷ್ಟಿಯಿಂದ ನಾವು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಮುಂದೆ ಆ ರೀತಿಯಾಗಬಾರದು ; ದೇಶದ ಒಳಿತಿಗಾಗಿ ಒಂದು ನಿರ್ಣಯ ತೆಗೆದುಕೊಂಡು ಬಂದಾಗ, ಅದರಲ್ಲಿ ಯಾವ ಒಂದು ಪ್ರೆಸ್ಟೀಜ್ ಇಷ್ಯೂ ಇರುವುದಿಲ್ಲವೆಂದು ಕಂಡುಬಂದಾಗ, ಅದನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಶಿವ ತನ್ನ ಜಡೆಯಿಂದ ನೀರನ್ನು ತಂದ ದೇಶ ಇದು. ಅರ್ಜುನ ಬಾಣ ಬಿಟ್ಟು ನೆಲದೊಳಗಿನಿಂದ ನೀರನ್ನು ಬರಿಸಿ ಭೀಷ್ಮನಿಗೆ ಉಣಿಸಿದ ದೇಶ ಇದು. ಅಂತಹ ಪವಾಡಗಳನ್ನು ಇಂದು ಜನರಿಗೆ ಮಾಡುವುದಕ್ಕಾಗುವುದಿಲ್ಲ. ಏನಿದ್ದರೂ ಸರ್ಕಾರದವರು ಅಂತಹ ಪವಾಡಗಳನ್ನು ಮಾಡಬೇಕಾಗುತ್ತದೆ. ಜೊತೆಗೆ ಅಂತಹ ಪವಾಡಗಳನ್ನು ಸಮಯಕ್ಕೆ ಸರಿಯಾಗಿ ಮಾಡಬೇಕೆಂದು ನನ್ನ ಕಳಕಳಿಯ ಪ್ರಾರ್ಥನೆಯಾಗಿದೆ ಈ ದೇಶದ ಒಂದು ದೌರ್ಭಾಗ್ಯವೆಂದರೆ ಶೇಕಡಾ ೮೦ ರಷ್ಟು ಜನರು ರೈತಾಪಿ ಕಸುಬನ್ನು ಅವಲಂಬಿಸಿರುವುದು. ಈ ರೈತರ ಬವಣೆ ಇಂದು ಹೇಳತೀರದಷ್ಟು ಇದೆ ; ಆ ಬಗ್ಗೆ ಬೇಕಾದರೆ ಇತಿಹಾಸ ಬರೆಯಬಹುದು ; ರೈತರೇ ಈ ದೇಶದ ಬೆನ್ನೆಲುಬು ಎಂದು ಸರ್ಕಾರ ಹೇಳುವಾಗ ಅವರಿಗೆ ಬೇಕಾದ ಅನುಕೂಲಗಳನ್ನು ಸಹ ಮಾಡಿಕೊಡಬೇಕಾಗುತ್ತದೆ. ಅದೇ ಪಾಶ್ಚಿಮಾತ್ಯ ದೇಶಗಳಲ್ಲಿ ಶೇಕಡಾ ಹತ್ತರಷ್ಟು ಜನರು ಮಾತ್ರ ವ್ಯವಸಾಯ ಕಸುಬನ್ನು ಅವಲಂಬಿಸಿದ್ದರೂ ಸಹ, ಅವರು ಇಡೀ ಪ್ರಪಂಚಕ್ಕೆ ಆಗುವಷ್ಟು ಆಹಾರವನ್ನು ಬೆಳೆದು ಊಟ ಮಾಡಿಸುತ್ತಿದ್ದಾರೆ. ಇದಕ್ಕೆ ಕಾರಣ ಅಲ್ಲಿಯ ಪ್ರತಿ ರೈತರೂ ಸಹ ೭-೮ ಎಕರೆ ಪ್ರದೇಶದ ವಿಸ್ತೀರ್ಣದಲ್ಲಿ ಕೊಳವೆಬಾವಿಗಳ ಮೂಲಕ ನೀರನ್ನು ಪಡೆದು ವ್ಯವಸಾಯ ಮಾಡುತ್ತಿರುವುದು. ಅಲ್ಲಿಗೆ ಹೋಗಿ ಬಂದವರೆಲ್ಲಾ ಇದನ್ನು ನೋಡಿದ್ದಾರೆ. ನಾನು ಸಹ

ಅಲ್ಲಿಗೆ ಹೋದಾಗ ನೋಡಿದ್ದೇನೆ. ಅದರಂತೆ ನಮ್ಮ ದೇಶದಲ್ಲಿಯೂ ಸಹ ಮುಂದೆ ಬರಬೇಕಾಗಿದೆ. ಈಗ ನಾವು ಸುಧಾರಿತ ಬೇಸಾಯ ಪದ್ಧತಿಯನ್ನು ಅನುಸರಿಸುತ್ತಿದ್ದರೂ ಸಹ, ಬೇರೆ ದೇಶಗಳ ಜೊತೆಗೆ ಪೈಪೋಟಿ ಮಾಡಬೇಕಾದರೆ ನಾವು ವ್ಯವಸಾಯಕ್ಕೆ ಎಷ್ಟೊಂದು ಮಾನ್ಯತೆ ಕೊಡಬೇಕು ಮತ್ತು ಎಷ್ಟೊಂದು ಎಚ್ಚರಿಕೆ ವಹಿಸಬೇಕು ಎನ್ನುವ ಬಗ್ಗೆ ಈ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಸಣ್ಣ ನೀರಾವರಿಗೆ ಸರ್ಕಾರದವರು ಸಾಕಷ್ಟು ಹಣವನ್ನು ಒದಗಿಸದಿರುವುದಕ್ಕೆ ಕಾರಣವೇನೆಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಆ ಕಾರಣವೇನೆಂದರೆ, ಕೇಂದ್ರ ಸರ್ಕಾರದವರು ನಮ್ಮ ರಾಜ್ಯದ ಪ್ರಗತಿಯುತವಾದಂಥ ದೊಡ್ಡದೊಡ್ಡ ಯೋಜನೆಗಳಿಗೆ ಕೊಡಬೇಕಾದಂಥ ಹಣವನ್ನು ಕೊಡದಿರುವ ಕಾರಣ, ನಮ್ಮ ಸರ್ಕಾರದವರು ತಮ್ಮಲ್ಲಿರುವ ಎಲ್ಲ ಮೊತ್ತವನ್ನು ಅದರ ಕಡೆಗೆ ಹರಿಸಬೇಕಾಗಿ ಬಂದಿದೆ. ಕಾಳಿ ಯೋಜನೆ, ಅಪ್ಪರ್‌ಕೃಷ್ಣಾ ಯೋಜನೆ ಮುಂತಾದ ದೊಡ್ಡ ದೊಡ್ಡ ಯೋಜನೆಗಳಿಗೆ ಸರ್ಕಾರದ ಬೊಕ್ಕಸದಲ್ಲಿರುವ ಹಣವನ್ನೆಲ್ಲಾ ಹರಿಸಬೇಕಾಗಿದೆ. ಇಂತಹ ಒಂದು ವಿಪರ್ಯಾಸ ನಮ್ಮ ಸರ್ಕಾರಕ್ಕೆ ಬಂದಿದೆ. ನಮ್ಮ ರಾಜ್ಯದಲ್ಲಿರುವ ಸಣ್ಣ ಪುಟ್ಟ ರೈತರಿಗೆ ಉಪಯೋಗವಾಗುವಂತಹ ಸಣ್ಣ ನೀರಾವರಿ ಯೋಜನೆಗಳಿಗೆ ಸರ್ಕಾರದವರು ಇನ್ನು ಮುಂದೆ ಆಧ್ಯ ಗಮನ ಕೊಡದೇ ಹೋದರೆ ವ್ಯವಸಾಯದಲ್ಲಿ ಪ್ರಗತಿ ಸಾಧನೆ ಮಾಡುವುದಕ್ಕಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳುತ್ತೇನೆ. ಈಗಿನ ಆಡಳಿತವಲ್ಲಿರುವ ಕೆಲವು ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಒಬ್ಬ ರೈತ ಒಂದು ಕೆರೆಯ ರಿಪೇರಿ ಮಾಡಿಸಬೇಕೆಂದು ಅರ್ಜಿ ಕೊಟ್ಟರೆ, ಆರು ತಿಂಗಳ ನಂತರ ಆತನಿಗೆ ಉತ್ತರ ಬರುತ್ತದೆ, ಏನೆಂದರೆ, ತಹಶೀಲ್‌ದಾರರ ಕಛೇರಿಯ ರಿಜಿಸ್ಟರ್ ನಂಬರ್ ಅದರಲ್ಲಿ ನಮೂದು ಆಗಿಲ್ಲ ಎಂದು ; ಆ ಅರ್ಜಿಯಲ್ಲಿ ತಹಶೀಲ್‌ದಾರ್ ಕಛೇರಿಯ ರಿಜಿಸ್ಟರ್ ನಂಬರ್ ಕಾಣಿಸುವುದಕ್ಕೆ ಜೀವಮಾನಪರ್ಯಂತ ಆತ ಹೋರಾಟ ಮಾಡುವಂತಹ ಒಂದು ಸನ್ನಿವೇಶ ಇಂದು ಬಂದಿದೆ. ಇಂತಹ ಉದಾಹರಣೆಗಳನ್ನು ನಾವು ದಿನವೂ ನೋಡಬಹುದಾಗಿದೆ. ಇಂತಹ ವಿಪರ್ಯಾಸವನ್ನು ಸರ್ಕಾರದವರು ಹೋಗಲಾಡಿಸದೇ ಹೋದರೆ ಕಾಲಕ್ಕೆ ಸರಿಯಾಗಿ ರೈತರ ನೆರವಿಗೆ ಸರ್ಕಾರದವರು ಬರುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ? ಒಬ್ಬ ರೈತ ತೂಬಿನ ರಿಪೇರಿ ಮಾಡಿಸಬೇಕು, ಅದರಿಂದ ಸರಿಯಾಗಿ ನೀರು ಬರುತ್ತಿಲ್ಲವೆಂದು ಅರ್ಜಿ ಕೊಟ್ಟರೆ, ಅದನ್ನು ಕೂಡಲೇ ರಿಪೇರಿ ಮಾಡಿಸುವುದು ಮುಖ್ಯವೋ ಅಥವಾ ಅದಕ್ಕೆ ಮೊದಲು ನಂಬರ್ ಕಾಣಿಸುವುದು ಮುಖ್ಯವೋ ಎಂಬುದನ್ನು ನೋಡಬೇಕು.

ದೇಶದಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚಿಸಬೇಕು, ಬೆಳೆಯನ್ನು ಬೆಳೆಸಬೇಕು ಎನ್ನುವ ನೀತಿಯನ್ನು ಇಟ್ಟುಕೊಂಡಾಗ ಶಾಸ್ತ್ರೀಯವಾಗಿ ಆಹಾರಧಾನ್ಯಗಳನ್ನು ಬೆಳೆಯಲು ಪ್ರಾಧಾನ್ಯತೆಯನ್ನು ಕೊಡುವುದಾದರೆ ಶಾಸ್ತ್ರೀಯವಾಗಿಯೇ ಜಾಸ್ತಿ ಬೆಳೆಯನ್ನು ಬೆಳೆಯಬಹುದು. ಇದರಿಂದ ಶಾಸ್ತ್ರೀಯವಾಗಿ ಅನ್ನ ಸಿಗುತ್ತದೆ ಎನ್ನುವಮಾತನ್ನು ನಾವು ಅರಿತುಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಒಂದೇ ಒಂದು ವಿಷಯವನ್ನು ಯೋಚನೆ ಮಾಡಬೇಕಾಗಿದೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸಣ್ಣ ನೀರಾವರಿ ಯೋಜನೆಯ ಕೆಳಗೆ ಬರತಕ್ಕ ಕೆರೆಗಳ ರಿಪೇರಿಯ ಬಗ್ಗೆ ಇಂತಿಷ್ಟು ಗ್ರಾಂಟ್ ಎಂದು ನೀವು ಏನು ಕೊಡುತ್ತೀರಿ, ಕೊಡತಕ್ಕ ಗ್ರಾಂಟ್ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ, ಅದು ಎಷ್ಟರಮಟ್ಟಿಗೆ ವಿನಿಯೋಗವಾಗುತ್ತಿದೆ, ಅದು ಸದ್‌ವಿನಿಯೋಗವಾಗುತ್ತಿದೆಯೇ, ಇಲ್ಲವೇ ಇವೆಲ್ಲವನ್ನು ಪರಿಶೀಲನೆ ಮಾಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅದಕ್ಕಾಗಿಯೇ ಒಂದು ಸಮನ್ವಯ ಸಮಿತಿಯ ರಚನೆಯ ಆವಶ್ಯಕತೆ ಇದೆ ಎನ್ನುವುದು. ಅಂತಹ ಸಮಿತಿಯ ರಚನೆಯನ್ನು ಮಾಡಿದರೆ ಯಾವ ಲೋಪ ದೋಷಗಳೂ ಆಗುವುದಕ್ಕೆ ಅವಕಾಶ ಇರುವುದಿಲ್ಲ. ನಾವು ಕೆರೆಯ ರಿಪೇರಿ ಬಗ್ಗೆ ಖರ್ಚುಮಾಡಿರತಕ್ಕ ಹಣದ ಪ್ರಮಾಣ ಸರಿಯಾಗಿ ಕೆರೆಯ ರಿಪೇರಿಗಾಗಿಯೇ ಉಪಯೋಗವಾದೆಯೇ ಎನ್ನುವುದನ್ನು ನೋಡಿದರೆ ನೂರಕ್ಕೆ ೮೦ ಭಾಗ ಆಗಿರುವುದಿಲ್ಲ. ಇದು ವಾಸ್ತವಾಂಶ. ಇದನ್ನು ನಾನು ಟೀಕೆಗಾಗಿ ಹೇಳುತ್ತಿಲ್ಲ. ಬ್ರಹ್ಮ ರಾಕ್ಷಸರಂತ ಕಂಟ್ರಾಕ್ಟರ್ಸ್ ತಾಲ್ಲೂಕುಗಳಲ್ಲಿ ಹುಟ್ಟಿಕೊಂಡಿರುತ್ತಾರೆ. ಅವರು ಬಿಲ್‌ಗಳನ್ನು ಮಾಡಿ ಹಣವನ್ನು ತೆಗೆದುಕೊಳ್ಳುವುದೊಂದೇ ಕೆಲಸ. ಯಾವ ಕೆಲಸಗಳೂ ಸಂಪೂರ್ಣವಾಗಿ ಆಗಿಯೇ ಇರುವುದಿಲ್ಲ. ದುಡ್ಡು ಈರೀತಿ ಪೋಲಾಗುವುದರಿಂದ ರೈತರಿಗೆ ಯಾವ ಪ್ರಯೋಜನವೂ ಇರುವುದಿಲ್ಲ. ಆದರೆ ಸರ್ಕಾರಕ್ಕೆ ಮಾತ್ರ ಖರ್ಚಾಗಿರುತ್ತದೆ. ಈ ಒಂದು ವ್ಯಾಪಾರವನ್ನು ತಪ್ಪಿಸದೆ ಹೋದರೆ ಯಾರಿಗೂ ಅನುಕೂಲವಾಗುವುದಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ನನ್ನ ಮಿತ್ರರಾದ ಶ್ರೀ ಪಾಟೀಲರು ಕೆಲವು ಮಾತುಗಳನ್ನು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಉದಾಹರಣೆಯಾಗಿ ಹೇಳುತ್ತೇನೆ ಸೀಗೆಹಳ್ಳಿ ಯೋಜನೆಯ ಬಗ್ಗೆ ಸುಮಾರು ೨೫ ವರ್ಷಗಳ ಕಾಲ ರೇಕಾರ್ಡ್‌ಗಳು ಹಿಂದೆ ಮುಂದೆ ತಿರುಗಾಡಿತು. ಇದು ಏತಕ್ಕೆ ತಿರುಗಾಡಿತು ಎಂದರೆ ಇದಕ್ಕೆ ಕಾರಣಗೊತ್ತಿದೆ. ಏರಿಕೆ ಎಲ್ಲೆಲ್ಲಿ ಆಗುತ್ತದೆ, ನೀರು ಎಲ್ಲೆಲ್ಲಿ ಇಳಿಯುತ್ತದೆ. ನೀರು ಸಾಕಷ್ಟು ಎಲ್ಲೆಲ್ಲಿದೆ ನಿಲ್ಲುತ್ತದೆ ನೀರು ನಿಲ್ಲುತ್ತದೆಯೋ ಇಲ್ಲವೋ, ಅದರ ಆವಶ್ಯಕತೆ ಸಾಕಷ್ಟು ಜಮೀನಿಗೆ ಸಿಕ್ಕುತ್ತದೆಯೋ ಇಲ್ಲವೋ, ಅಚ್ಚು ಕಟ್ಟು ಎಷ್ಟಾಗುತ್ತದೆ ಎಂಬುದಿಷ್ಟನ್ನೂ ನೋಡಬೇಕಾದರೆ ೨೫ ವರ್ಷಗಳಕಾಲ ಕಾಲ ಹಿಡಿಯಿತು.

ಪ್ರತಿಯೊಂದು ರೆಕಾರ್ಡ್ ಹಿಂದೆಮುಂದೆ ಹೀಗೆ ಓಡಾಡಿಸಿಕೊಂಡು ಇದ್ದರೆ ಈ ಕಾರ್ಯವನ್ನು ಯಾವಾಗ ಮಾಡುತ್ತಾರೆ ನೋಡಬೇಕಾಗುತ್ತದೆ. ಇದರಲ್ಲಿ ಪ್ರಭಾವಿ ವ್ಯಕ್ತಿಗಳ ಕೈವಾಡ ಬೇರೆ ಇರುತ್ತದೆ. ತಮ್ಮ ಜಮೀನು ಎಲ್ಲಿ ಮುಳುಗಡೆ ಯಾಗುತ್ತದೋ ಎನ್ನುವ ದೃಷ್ಟಿಯಿಂದ ಇನ್ನು ಯಾವು ಯಾವುದೋ ದೃಷ್ಟಿಯಿಂದ ಮತ್ತು ಅಧಿಕಾರಿಗಳನ್ನು ಒಳಗೆ ಹಾಕಿಕೊಂಡು ಈ ಯೋಜನೆಯನ್ನು ಫಲಕಾರಿಯಾಗದಂತೆ ಮಾಡಿರುತ್ತಾರೆ ರೆಕಾರ್ಡ್ ಮಾಡುವಾಗ ಇಂಥ ಎಲ್ಲ ಕಾರ್ಯಸಾಧನೆಗಳು ಕೂಡ ವರ್ಷೇ ವರ್ಷೇ ನಡೆದು ಕೊಂಡು ಬರುವಂತಾದರೆ ಯಾವ ಯೋಜನೆ ತಾನೆ ಫಲಕಾರಿಯಾದಿತು. ತಾವು ಇದನ್ನು ಅರ್ಥಮಾಡಿ ಕೊಳ್ಳಬೇಕು. ಸಣ್ಣ ನೀರಾವರಿ ಯೋಜನೆಗೆ ಆದ್ಯತೆಯನ್ನು ಕೊಡದೆ ಹೋದರೆ ದೇಶದಲ್ಲಿ ನಿಜವಾಗಿಯೂ ಕೂಡ ರೈತರ ಬವಣೆಯನ್ನು ಯಾರೂ ತಪ್ಪಿಸುವುದಕ್ಕಾಗುವುದಿಲ್ಲ. ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ ಸಣ್ಣ ನೀರಾವರಿ ಯೋಜನೆಗೆ ಕ್ಯಾಬಿನೆಟ್ ರ್‍ಯಾಂಕಿನ ಮಂತ್ರಿಗಳು ಇರಬೇಕಾಗಿತ್ತು, ನಮ್ಮ ದುರ್ದೈವ ಇವತ್ತು ಇಲ್ಲ. ನಮ್ಮ ದೇಶದಲ್ಲಿ ೮೦ ಭಾಗ ಜನ ರೈತರಲ್ಲಿ ಸಣ್ಣ ಸಣ್ಣ ರೈತಾಪಿ ಕಸಬುಗಳನ್ನು ಮಾಡಿಕೊಂಡಿರುವವರೇ ಜಾಸ್ತಿ. ಅಂಥವರ ಅನುಕೂಲ, ಆಗತಕ್ಕ ಈ ಯೋಜನೆಯ ಕಾರ್ಯಕ್ರಮದಲ್ಲಿ ನೀವು ಎಷ್ಟರಮಟ್ಟಿಗೆ ಆಧ್ಯತೆಯನ್ನು ಕೊಡಬೇಕು ಅದನ್ನು ಯೋಚನೆ ಮಾಡಬೇಕು. ನೀವು ಸಮಾಜವಾದ ಸರ್ಕಾರವನ್ನು ರಚನೆ ಮಾಡಿದಂಥ ಜನ ಇಂಥ ಸಣ್ಣ ಸಣ್ಣ ಕಾರ್ಯಗಳನ್ನು ಮಾಡುವಾಗ ಇದಕ್ಕೆ ಆದ್ಯತೆ ಕೊಡದೆ ಹೋದರೆ ನೀವು ಏನು ಉದ್ದೇಶ ಇಟ್ಟುಕೊಂಡಿದ್ದೀರಿ ಆ ಉದ್ದೇಶ ಫಲಕಾರಿಯಾದೀತೆ ಎನ್ನುವ ಪ್ರಶ್ನೆ ಈ ಸಂದರ್ಭದಲ್ಲಿ ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಇನ್ನೊಂದು ಮಾತು ಹೇಳಿ ನನ್ನ ಮಾತನ್ನು ಮಂಗಿಸುತ್ತೇನೆ ನನ್ನ ಕಡೆಯಲ್ಲಿ ಯಾವುದೋ ಶಿವಪ್ಪನಾಯಕನ ಕಾಲದಲ್ಲಿ ಕಟ್ಟಿದಂಥ ಕೆರೆ ಇದೆ. ಈ ಕೆರೆ ಯಾವ ರೀತಿ ಇದೆ ಎಂದರೆ ನಿಜವಾಗಿಯೂ ಜನವರಿ ಮುಗಿಯುವಹೊತ್ತಿಗೆ ಒಂದು ತೊಟ್ಟು ನೀರು ಇರುವುದಿಲ್ಲ ನಾವು ಸರ್ಕಾರಕ್ಕೆ ಪದೇ ಪದೇ ಕೇಳಿಕೊಳ್ಳುತ್ತಲೇ ಇರುತ್ತೇವೆ. ಇದರಲ್ಲಿ ಗೋಡು ತುಂಬಿಕೊಂಡಿರುತ್ತದೆ. ಗೋಡು ತೆಗೆಯತಕ್ಕ ಕ್ರಮ ಹಾಕಿಕೊಂಡು ಮಾಡಿದರೆ ನೀರು ಸಂಪೂರ್ಣವಾಗಿ ನಿಂತು ರೈತರಿಗೆ ಬೇಸಾಯಕ್ಕೆ ಅನುಕೂಲವಾತ್ತದೆ ಎನ್ನುವ ದೃಷ್ಟಿಯಿಂದ ಅರ್ಜಿಯನ್ನು ಪದೇ ಪದೇ ಹಾಕುತ್ತಲೇ ಇದ್ದೇವೆ. ಸರ್ಕಾರದ ನೀತಿ ಗೋಡನ್ನು ತೆಗೆಸುವ ಪ್ರಯತ್ನವಿಲ್ಲ ಗೋಡು ಎಂದರೆ ಅದು ಗೊಬ್ಬರ, ಗೋಡನ್ನು ತೆಗೆದುಕೊಂಡರೆ ಬೇಕಾದಷ್ಟು ಗೊಬ್ಬರವಾಗುತ್ತದೆ. ಏತಕ್ಕೆ ಸರ್ಕಾರ ಗೋಡನ್ನು ತೆಗೆಸಬೇಕು. ನೀವೆ ತೆಗೆಸಿ ಜಮೀನುಗಳಿಗೆ ಹಾಕಿ ಕೊಳ್ಳಬಹುದಲ್ಲ ಎಂದು ಹೇಳುತ್ತಾರೆ. ಮಲೆನಾಡಿನಲ್ಲಿ ಗೋಡು ತೆಗೆಸಿ ಜಮೀನಿಗೆ ಹಾಕಿದರೆ ಅದು ಚವಳು ಮಣ್ಣಾಗಿರುವುದರಿಂದ ಅದನ್ನು ಹಾಕಿದ ಜಮೀನಿನಲ್ಲಿ ಧಾನ್ಯವನ್ನು ಬೆಳೆಯುವುದಕ್ಕಾಗುವುದಿಲ್ಲ. ಬಯಲು ಸೀಮೆಯ ಕೆರೆಗಳ ಗೋಡು ಗೊಬ್ಬರವಾಗುತ್ತದೆ. ಮಲೆನಾಡು ಪ್ರದೇಶದಲ್ಲಿ ಹಾಗಾಗುವುದಿಲ್ಲ. ಹೀಗಿರುವುದರಿಂದ ಇದರ ಬಗ್ಗೆ ಅಧ್ಯಗಮನ ಕೊಡಬೇಕು. ರೈತರಿಗೆ ಹೆಚ್ಚಿನ ಹಣ ಕೊಟ್ಟು ನೆರವಾಗಬೇಕು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚೆನ್ನಪ್ಪ —(ಮಾಗಡಿ) ಮಾನ್ಯ ಸಭಾಪತಿಗಳೇ ಈಗ ಮಾತನಾಡುತ್ತಾ ಇರ ತಕ್ಕಂಥ ಸಣ್ಣ ಸಣ್ಣ ನೀರಾವರಿ ಯೋಜನೆಗಳ ವಿಷಯದಲ್ಲಿ ಈಗ ಕೊಟ್ಟಿರತಕ್ಕಂಥ ಹಣ ಏನೂ ಸಾಲದು ಎಂದು ತಂದಿರತಕ್ಕ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ನಮ್ಮ ದೇಶದಲ್ಲಿ ವ್ಯವಸಾಯ ಪ್ರಾಧಾನ್ಯವಾಗಿ ಇರತಕ್ಕಂಥ ದೇಶ ನಾವು ಈಗ ತಾನೇ ಕಾಣಬಹುದು. ವ್ಯವಸಾಯದಲ್ಲಿ ಈಗ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುತ್ತಾ ಹೋದರೆ ಅದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಮತ್ತು ಆದ್ದರಿಂದ ನಾವು ಹೆಚ್ಚಿನ ಹಸಿರು ಕ್ರಾಂತ್ರಿಯನ್ನು ಸಾಧಿಸುವುದಕ್ಕೆ ನಿಜವಾಗಿಯೂ ಸಾಧ್ಯವಾಗುವುದಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಸಣ್ಣ ನೀರಾವರಿ ಯೋಜನೆಯನ್ನು ಹೆಚ್ಚಿನ ಮಟ್ಟದಲ್ಲಿ ಕೈಕೊಳ್ಳುವುದಾದರೆ ದೇಶದ ಎಲ್ಲ ಭಾಗದಲ್ಲಿ ಸಣ್ಣ ಸಣ್ಣ ಕೆರೆಗಳು, ಸಣ್ಣ ಸಣ್ಣ ಬಾವಿಗಳನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟರೆ ದೇಶದಲ್ಲಿ ಬೀಳತಕ್ಕ ಮಳೆಹನಿ ಭೂಮಿಯಲ್ಲಿ ಇಂಗಿ ತೇವಾಂಶ ಜಾಸ್ತಿಯಾಗಿ ಮಣ್ಣಿನ ಸ್ಥಗಿತವನ್ನು ತಡೆಗಟ್ಟಬಹುದು ಈ ರೀತಿಯಾದ ಹೆಚ್ಚಿನ ಪರಿಹಾರ ಕಾರ್ಯ ಯೋಜನೆಗಳನ್ನು ಹಾಕುವುದರಿಂದ ಎಲ್ಲ ಪ್ರದೇಶಗಳಲ್ಲಿ ನೀರಾವರಿಯನ್ನು ಒದಗಿಸಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಈ ಹೊತ್ತಿನ ದಿನ ದೊಡ್ಡ ನೀರಾವರಿ ಯೋಜನೆಗಳನ್ನು ಕೈಕೊಳ್ಳುವುದರಿಂದ ಯಾವ ಒಂದು ದೊಡ್ಡ ರೈತರಿಗೆ ಸಹಾಯವಾಗುತ್ತದೆ ಆದ್ದರಿಂದ ಅವರಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಉದಾಹರಣೆಗಾಗಿ ಮಂಡ್ಯ ಜಿಲ್ಲೆಯನ್ನು ತೆಗೆದುಕೊಂಡರೆ ಜಿಲ್ಲೆಯ ಹೆಚ್ಚಿನ ಪ್ರದೇಶಗಳು ಒಳಪಡುತ್ತವೆ. ಅಕ್ಕಿಯನ್ನು ಆ ಪ್ರದೇಶದಿಂದ ಬೆಂಗಳೂರಿಗೆ ತೆಗೆದುಕೊಂಡು ಬರುವುದಕ್ಕೆ ಸಾಧ್ಯವಿಲ್ಲ. ಜಿಲ್ಲಾ ನಿಯಂತ್ರಣ ಇರುವುದರಿಂದ ಜಿಲ್ಲೆಯಿಂದ ಜಿಲ್ಲೆಗೆ ದಾಸ್ತಾನನ್ನು ಸಾಗಿಸಕೂಡದು ಎಂದು ನಿಯಂತ್ರಣ ಇರ ವುದರಿಂದ ಅಲ್ಲಿ ದೊಡ್ಡ ಪ್ರಾಜೆಕ್ಟ್‌ಗಳನ್ನು ಇದ್ದು ಅಲ್ಲಿ ಬೆಳೆಯತಕ್ಕ ಅಕ್ಕಿಯನ್ನು ಸಣ್ಣ ಸಣ್ಣ ಪ್ರದೇಶಗಳಿಗೆ ತೆಗೆದು ಕೊಂಡು ಬರುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಹೆಚ್ಚಿನ ಕಷ್ಟವಾಗುತ್ತಾ ಇದೆ. ನಮ್ಮ ದೇಶದ ನೀರಾ

ವರಿ ಯೋಜನೆಗಳ ಸ್ಥಿತಿಯನ್ನಾಗಲಿ ಅಥವಾ ತೊಂದರೆಯನ್ನಾಗಲಿ ಸಾಧಿಸುವುದಕ್ಕೆ ಆಗುವುದಿಲ್ಲ. ಸಣ್ಣ
ಸಣ್ಣ ಕೆರೆಗಳನ್ನು ಕಟ್ಟುತ್ತಾ ಹೋದರೆ ದೇಶದ ಎಲ್ಲಾ ಭಾಗದಲ್ಲೂ ಅಲ್ಪಸ್ವಲ್ಪ ತೊಂದರೆಯನ್ನು ನೀಗಿ
ಸುವುದಲ್ಲದೆ, ಬೇಸಾಯಕ್ಕೆ ಅವಕಾಶ ಮಾಡಿಕೊಟ್ಟಂದತಾಗುತ್ತದೆ. ಒಂದು ವಿಷಯ ನಾವು ಹೆಚ್ಚಿನ
ಪ್ರಗತಿಯನ್ನು ಸಾಧಿಸಬೇಕಾದರೆ ಹೆಚ್ಚಿನ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳುವ ಮುಖೇನ ಪ್ರಗತಿ
ಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈಗ ಏನು ೧೦ ಕೋಟಿ ರೂಪಾಯಿಗಳನ್ನು
ಅದಕ್ಕೆ ಇಟ್ಟಿದ್ದೇವೆ ಅದು ಸಾಕಾಗುವುದಿಲ್ಲ. ಆದ್ದರಿಂದ ಇದನ್ನು ಇನ್ನೂ ಹೆಚ್ಚು ಮಾಡಿ ಇನ್ನು ಹೆಚ್ಚಿನ
ಕೊಳವೆ ಬಾವಿಗಳನ್ನು ತೆಗೆಯಬೇಕು. ಹತ್ತು ಕೋಟಿ ರೂಪಾಯಿ ಕೊಟ್ಟಿರುವುದು ದೊಡ್ಡ ನೀರಾವರಿ
ಯೋಜನೆಗಳನ್ನು ಕಡಿಮೆ ಮಾಡಿ ಸಣ್ಣ ನೀರಾವರಿ ಯೋಜನೆಗಳನ್ನು ಕಡಿಮೆ ಮಾಡಿ, ಸಣ್ಣ ನೀರಾವರಿ
ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದು ಈವತ್ತಿನ ದಿವಸ ಆಹಾರ ಧಾನ್ಯವನ್ನು ಬೆಳೆಸುವು
ದರಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಈವೊತ್ತಿನ ದಿವಸ ಹೆಚ್ಚಿನ ಬೆಳೆ ಮಳೆಯ
ಆಧಾರದ ಮೇಲೆ ನಿಲ್ಲತಕ್ಕ ಪ್ರದೇಶಗಳು ಇವೆ. ಪ್ರಾಮುಖ್ಯವಾಗಿ ಮಳೆ ಎಲ್ಲಿ ಹೆಚ್ಚು ಬೀಳುತ್ತದೆ ಅಲ್ಲಿ
ಥಕ್ಕೆ ಇದ್ದು ಬೆಳೆಗಳು ಬೆಳೆಯುವುದಿಲ್ಲ. ಯಾವ ಕಾಲದಲ್ಲಿ ಮಳೆ ಬೇಕೋ ಆ ಕಾಲದಲ್ಲಿ
ಮಳೆಯಾಗುವುದಿಲ್ಲ ಯಾವ ಕಾಲದಲ್ಲಿ ಮಳೆ ಬೇಕಾಗುವುದಿಲ್ಲವೋ ಆ ಕಾಲದಲ್ಲಿ ಹೆಚ್ಚು ಮಳೆ
ಬೀಳುವುದರಿಂದ ಬೆಳೆಗಳು ತೊಂದರೆಗೊಳಗಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಆಗುವು
ದಿಲ್ಲ. ಸಣ್ಣ ಸಣ್ಣ ಯೋಜನೆಗಳನ್ನು ಮಾಡುವುದರಿಂದ ನೀರನ್ನು ತಡೆದು ಎಷ್ಟು ನೀರು ಬೇಸಾ
ಯಕ್ಕೆ ಬೇಕೋ ಅಷ್ಟು ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡಿಕೊಳ್ಳಬಹುದು. ಆಮೇಲೆ
ಇಂತಕ್ಕ ಮಳೆ ಸರಿಯಾಗಿ ಕಾಲಕಾಲಕ್ಕೆ ಬೀಳುವುದರಿಂದ ಏನು ಆಹಾರದ ಕೊರತೆಯಿದೆ ಅದನ್ನು ಸ್ವಲ್ಪ
ಮಟ್ಟಿಗಾದರೂ ನೀಗಿಸಲು ಒಂದು ಅವಕಾಶವಾಗುತ್ತದೆ. ಅದನ್ನು ಬಿಟ್ಟರೆ ನಾವು ಆಹಾರ ಧಾನ್ಯವನ್ನು
ದೊಡ್ಡ ನೀರಾವರಿ ಯೋಜನೆಗಳಿಂದ ಸಾಧಿಸಲು ಸಾಧ್ಯವಿಲ್ಲ ಎನ್ನುವ ಪೂರ್ಣವಾದ ನಂಬಿಕೆಯಿಂದ
ಒತ್ತಾಯ ಪೂರ್ವಕವಾಗಿ ಅನೇಕ ಸಂದರ್ಭದಲ್ಲಿ ಹೇಳಿರುತ್ತೇನೆ.

5-00 P. M.

ಎಲ್ಲಿಯವರೆಗೆ ನಮ್ಮ ದೇಶದಲ್ಲಿ ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದಿಲ್ಲವೋ
ಅಲ್ಲಿಯವರೆಗೂ ಆಹಾರ ಅಭಾವವನ್ನು ನೀಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ರೈತರಿಗೆ ಹೆಚ್ಚಿನ ಭಾವಿ
ಗಳನ್ನು ತೋಡಿಸಿಕೊಟ್ಟು ಹೆಚ್ಚಿನ ಪಂಪ್‌ಸೆಟ್‌ಗಳನ್ನು ಒದಗಿಸಿಕೊಡಬೇಕು. ಸಣ್ಣ ನೀರಾವರಿಯನ್ನು
ನಿಕೃಷ್ಟವಾಗಿ ಕಾಣುತ್ತಿರುವುದರಿಂದ ಇದಕ್ಕೆ ಹೆಚ್ಚಿನ ಮಾನ್ಯತೆಯನ್ನು ಕೊಟ್ಟು ಕ್ಯಾಬಿನೆಟ್ ದರ್ಜೆಯ
ಮಂತ್ರಿಗಳು ಇರಬೇಕು. ಈ ಕಾರ್ಯಕ್ಕಾಗಿ ಸಾಕಷ್ಟು ಹಣವನ್ನು ಮೀಸಲಿಟ್ಟು ದೇಶದಲ್ಲಿ ಈಗಾಗಲೇ
ಸಾಕಷ್ಟು ಸರ್ವೆ ಕೆಲಸವೂ ಕೂಡ ನಡೆದಿದೆ. ಎಲ್ಲೆಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಬಹುದು. ಎಲ್ಲೆಲ್ಲಿ
ಪಿಕಪ್‌ಗಳನ್ನು ಕಟ್ಟಬಹುದೆಂಬ ಬಗ್ಗೆ ಬಹಳ ಹಿಂದೆಯೇ ಸರ್ವೆ ಮಾಡಿದ್ದು ಪ್ಲಾನ್, ಎಸ್ಟಿಮೇಟ್‌ಗಳನ್ನು
ತಯಾರು ಮಾಡಿ ಇಟ್ಟಿದ್ದಾರೆ. ಅವುಗಳನ್ನೆಲ್ಲಾ ಕಾರ್ಯಗತಕ್ಕೆ ತಂದು ನಮ್ಮ ದೇಶದಲ್ಲಿ ಜಲ ವಿವಾದಕ್ಕೆ
ಕಿತ್ತಾಡುವುದನ್ನು ತಪ್ಪಿಸಬೇಕು. ದೊಡ್ಡ ದೊಡ್ಡ ತೊರೆಗಳಿಗೆ ಹೋಗುವ ನೀರನ್ನು, ಸಮುದ್ರಕ್ಕೆ
ಹೋಗುವ ನೀರನ್ನು ಒಳನಾಡಿನಲ್ಲೇ ತಡೆದಿಟ್ಟು ಬೇಸಾಯಕ್ಕೆ ಉಪಯೋಗಿಸಿಕೊಳ್ಳುವು
ದಾದರೆ ನಮ್ಮ ವ್ಯವಸಾಯನ್ನು ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆ. ಮಳೆಯ ನೀರನ್ನೇ ನಂಬಿಕೊಂಡು
ವ್ಯವಸಾಯಂ ಮಾಡಿ ಅದಕ್ಕೆ ತಕ್ಕ ಪ್ರತಿಫಲ ಸಿಕ್ಕದೇ ಕಂಗಾಲಾಗಿರತಕ್ಕ ರೈತನ ಪರಿಸ್ಥಿತಿಯನ್ನು ಈ
ಯೋಜನೆಗಳಿಂದ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಸ್ಕೀಂನಿಂದ ಪ್ರತಿಯೊಬ್ಬ ರೈತನೂ ಕೂಡ
ಅಲ್ಪಸ್ವಲ್ಪ ಬೆಳೆದುಕೊಂಡು ತನ್ನ ಜೀವನವನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.
ಈಗ ಕೇಳಿರತಕ್ಕ ೧೦ ಕೋಟಿ ರೂಪಾಯಿಯೂ ಕೂಡ ಬಹಳ ಕಡಿಮೆಯಾಗಿರುವುದರಿಂದ ಇನ್ನೂ ಜಾಸ್ತಿ
ಕೊಟ್ಟರೆ ಅನುಕೂಲವಾಗುತ್ತದೆಂದು ಹೇಳಿ, ಈ ಸಂದರ್ಭದಲ್ಲಿ ಇಷ್ಟು ಮಾತುಗಳನ್ನಾಡಲು ಅವಕಾಶ
ವನ್ನು ಮಾಡಿಕೊಟ್ಟ ಸಭಾಪತಿಗಳಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯಮಾಡುತ್ತೇನೆ.

† ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ
ಶ್ರೀಮಾನ್ ಪುಟ್ಟಸ್ವಾಮಿಯವರು ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಬೆಂಬಲ
ಮಾಡುತ್ತಾ ಮಾತನ್ನು ಒಂದೆರಡು ಹೇಳಬಯಸುತ್ತೇನೆ. ಬಹು ಮುಖ್ಯವಾಗಿ ಎಲ್ಲ ಮಾನ್ಯ ಸದಸ್ಯರೂ
ಹೇಳಿದ ಹಾಗೆ ತಕ್ಷಣದಲ್ಲಿ ಪ್ರತಿಫಲವನ್ನು ಕೊಡತಕ್ಕ ಯೋಜನೆಗಳು ಎಂದರೆ ಈ ಸಣ್ಣ ನೀರಾವರಿ ಯೋಜ
ನೆಗಳು. ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಏನಿವೆ ಅವುಗಳಿಂದ ತಕ್ಷಣ ನಮಗೆ ಪ್ರತಿಫಲ ಬರುವು
ದಿಲ್ಲ. ಅಲ್ಲದೆ ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಬಂದಿಲ್ಲ. ಈಗ ಈ ಕೆಲಸ ಅರ್ಧಕ್ಕೆ ನಿಂತಿದೆ. ಇದು
ಯಾವ ಕಾಲಕ್ಕೆ ಸಂಪೂರ್ಣವಾಗಿ ಆಗುತ್ತದೋ ಗೊತ್ತಿಲ್ಲ. ಆದುದರಿಂದ ನಮಗೆ ಕೂಡಲೇ ಫಲವನ್ನು

ಕೊಡತಕ್ಕ ಸಣ್ಣ ನೀರಾವರಿಗಳು ಏನಿವೆ ಅದಕ್ಕೆ ನಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಇದರಲ್ಲಿ ಸಣ್ಣ ಸಣ್ಣ ಕೆರೆಗಳ ರಿಪೇರಿ ಮೇಜರ್ ಟ್ಯಾಂಕ್ಸ್, ಲಿಫ್ಟ್ ಇರಿಗೇಷನ್ ಇತ್ಯಾದಿ ನೀರಾವರಿ ಇದೆ. ಇವು ಬಹಳ ಪ್ರಾಮುಖ್ಯವಾಗಿ ಆಗಬೇಕಾದುದು. ಮಲೆನಾಡಿನಲ್ಲಿ ಎಲ್ಲೆಲ್ಲಿ ಸಣ್ಣ ಸಣ್ಣ ಹೊಳೆಗಳಿವೆ ಅಲ್ಲಲ್ಲಿ ಏತದ ನೀರಾವರಿ ಅಂದರೆ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಹೆಚ್ಚಿನ ರೀತಿಯಲ್ಲಿ ಒಂದು ಸಮರ್ಪಕವಾದ ಕಾರ್ಯಕ್ರಮವನ್ನು ರೂಪಿಸಿಕೊಂಡು ಒಂದು ಮಾಸ್ಟರ್ ಪ್ಲಾನ್ ಮಾಡಬೇಕು. ಕೆರೆಗಳ ರಿಪೇರಿ ವಿಚಾರದಲ್ಲಿ ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಆಫೀಸಿನಲ್ಲಿ ಲಿಸ್ಟನ್ನು ತಯಾರು ಮಾಡಿದ್ದಾರೆ. ಅದರಲ್ಲಿ ಸರ್ವೆ ನಂಬರ್ ತಪ್ಪು ಇರುತ್ತದೆ, ಕೆರೆ ಹೆಸರು ತಪ್ಪು ಇರುತ್ತದೆ, ವಿವರಗಳು ಗೊತ್ತಿರುವುದಿಲ್ಲ, ಆಯಕಟ್ಟು ಎಷ್ಟು ಇದೆ ಅಷ್ಟಕ್ಕೂ ನೀರಾವರಿಯಾಗುತ್ತದೆಯೋ ಎಂಬುದು ಗೊತ್ತಿರುವುದಿಲ್ಲ. ಅಂಥ ಲಿಸ್ಟನ್ನು ಇಟ್ಟುಕೊಂಡು ಏನು ಮಾಡುತ್ತೀರಿ ? ಅಲ್ಲಿ ವಾಟರ್ ರೇಟ್ ಹಾಕಬೇಕಾದರೆ ಇಷ್ಟು ಎಕರೆ ಜಮೀನಿಗೆ ನೀರನ್ನು ಸರಬರಾಜು ಮಾಡಬೇಕು ಎಂದು ಅಸಿಸ್ಟೆಂಟ್ ಕಮಿಷನ್‌ರವರು, ಅಸಿಸ್ಟೆಂಟ್ ಇಂಜಿನಿಯರ್‌ರವರು ಸರ್ಟಿಫೈ ಮಾಡಬೇಕು ಎಂದು ಇದೆ. ಅದನ್ನೂ ಮಾಡುತ್ತಾ ಇಲ್ಲ. ನೀವು ಇಷ್ಟು ಹಣವನ್ನು ಕೊಡಬೇಕೆಂದು ಕೇಳದೇ ಎಲ್ಲರಿಗೂ ಒಂದೇ ತರಹ ನೋಟೀಸ್ ಕೊಟ್ಟು ಹಣವನ್ನು ವಸೂಲು ಮಾಡಬೇಕಾದರೆ ಅದಕ್ಕೆ ತಕ್ಕಂತೆ ನೀರನ್ನು ಸಪ್ಲೈ ಮಾಡತಕ್ಕ ಜವಾಬ್ದಾರಿಯೂ ಕೂಡ ಸರ್ಕಾರಕ್ಕೆ ಇದೆ. ಮಾನ್ಯ ಮಂತ್ರಿಗಳು ಇದನ್ನು ಮರೆಯಬಾರದು, ಈ ಕಾರಣಕ್ಕೋಸ್ಕರ ಅವರಿಗೆ ಕೆರೆಗಳನ್ನು ತಕ್ಷಣ ರಿಪೇರಿ ಮಾಡಿ ಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಎರಡನೆಯ ವಿಚಾರ. ಮಲೆನಾಡಿನಲ್ಲಿರುವ ಕೆರೆಗಳಲ್ಲಿ ಹೂಳು ಹೆಚ್ಚಾಗಿ ಬಂದಿದೆ. ಸಿಲ್ಟ್ ತುಂಬಿರುತ್ತದೆ ಅಲ್ಲಿ ದೊಡ್ಡ ದೊಡ್ಡ ಕೆರೆಗಳು ಇಲ್ಲ. ಭಾವಿಗಳಲ್ಲಿ ನೀರು ಬರುವುದಿಲ್ಲ. ಅವನ್ನು ಡೀಸಿಲ್ಟ್ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ಮಲೆನಾಡು ಪ್ರಯೋಜನವಾಗುವುದಿಲ್ಲ. ನಮ್ಮದು ಮಲೆನಾಡು ಗುಡ್ಡಗಾಡು ಪ್ರದೇಶವಾದುದರಿಂದ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುವುದಕ್ಕಾಗುವುದಿಲ್ಲ. ನಮ್ಮ ಮಲೆನಾಡು ಪ್ರಯೋಜನಕ್ಕೆ ಬರಬೇಕಾದರೆ ಭಾವಿ ಮತ್ತು ಕೆರೆಗಳಲ್ಲಿನ ಸಿಲ್ಟ್ ರಿಮೂವ್ ಮಾಡಿಸಬೇಕು, ಲಿಫ್ಟ್ ಇರಿಗೇಷನ್ ಆಗಬೇಕು. ಸಣ್ಣ ಸಣ್ಣ ಪಿಕಪ್‌ಗಳು ಆಗಬೇಕು. ಇದಕ್ಕೆಲ್ಲಾ ಹೆಚ್ಚು ಹಣ ಖರ್ಚಾಗುವುದಿಲ್ಲ. ಸುಮಾರು ೫೦ ಸಾವಿರ ರೂಪಾಯಿ ಖರ್ಚು ಮಾಡಿದರೆ ಸುಮಾರು ಸಾವಿರ, ಎರಡು ಸಾವಿರ ಎಕರೆ ನೀರಾವರಿಯಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು. ಈಗ ದುಡ್ಡು ಇಲ್ಲವೆಂದು ಹೇಳಬಹುದು, ಬಡ್ಜೆಟ್ ಪಾಸ್ ಆಗಿದೆ ಎಂದು ಹೇಳಬಹುದು ಈ ಮಾನ್ಯ ಸಭೆಗೆ ಅಧಿಕಾರ ಇದೆ ಸಪ್ಲಿಮೆಂಟರಿ ಡಿಮ್ಯಾಂಡ್‌ನ್ನು ಇಡಿ. ಎಲ್ಲ ಮಾನ್ಯ ಸದಸ್ಯರೂ ಕೂಡ ಒಮ್ಮತದಿಂದ ಪಾಸ್ ಮಾಡುತ್ತಾರೆಂಬ ಭರವಸೆ ನನಗಿದೆ. ಈಗ ಇಷ್ಟಾದರೂ ಮಾಡಿಕೊಡಿ. ಇನ್ನು ಮುಂದಕ್ಕೆ ಕೊನೇಪಕ್ಷ ವರ್ಷಕ್ಕೊಂದು ಮಾಸ್ಟರ್ ಪ್ಲಾನ್ ಹಾಕಿಸಿ ಪ್ರತಿಯೊಂದು ಪ್ರೋಗ್ರಾಂನಲ್ಲೂ ಒಂದು ವರ್ಷಕ್ಕೆ ಸಣ್ಣ ನೀರಾವರಿಗಾಗಿ ೨೫_೩೦ ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡದೇ ಹೋದರೆ ಸಣ್ಣ ವ್ಯವಸಾಯಗಾರರಿಗೆ ಹೆಚ್ಚಿನ ಪ್ರಯೋಜನವನ್ನು ಮಾಡಿಕೊಟ್ಟಂತಾಗುವುದಿಲ್ಲ ಎಂದು ನನ್ನ ಅಭಿಪ್ರಾಯವನ್ನು ಸೂಚಿಸಬಯಸುತ್ತೇನೆ.

ಇನ್ನೊಂದು ಮುಖ್ಯ ವಿಚಾರ ಎಂದರೆ ಸಣ್ಣ ಕೆರೆಗಳ ರಿಪೇರಿ ಕೆಲಸವನ್ನು ತಾಲ್ಲೂಕು ಬೋರ್ಡು ಗಳಿಗೆ ಕೊಟ್ಟಿದ್ದೀರಿ. ಅವರಲ್ಲಿ ಹಣ ಇಲ್ಲ, ಅಲ್ಲಿ ಒಬ್ಬರು, ಇಬ್ಬರು ಜೂನಿಯರ್ ಇಂಜಿನಿಯರುಗಳು ಇರುತ್ತಾರೆ ಒಬ್ಬ ಟೆಕ್ನಿಕಲ್ ಸಹ ಇರುವುದಿಲ್ಲ. ಅಂಥವರಿಗೆ ಕೊಟ್ಟರೆ ಅವರಿಂದ ಯಾವ ಕೆಲಸವೂ ಕೂಡ ಆಗುವುದಿಲ್ಲ. ಏರಿಗೆ ಮಣ್ಣು ಹಾಕಿ ದುಡ್ಡು ತೆಗೆದುಕೊಳ್ಳುತ್ತಾರೆ. ಆದುದರಿಂದ ಕೆರೆಗಳ ರಿಪೇರಿ ಕೇಸಗಳನ್ನು ಈ ತಾಲ್ಲೂಕು ಬೋರ್ಡುಗಳಿಂದ ತಪ್ಪಿಸಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೊಂದು ಬಹುಮುಖ್ಯವಾದ ವಿಚಾರ ಎಂದರೆ ನಮ್ಮ ದೇಶಕ್ಕೆ ಕೆರೆಗಳೇ ಸಂಪತ್ತು. ಹಿಂದೆ ರಾಜರ ಕಾಲದಲ್ಲಿ, ಪಾಳೇಗಾರರ ಕಾಲದಲ್ಲಿ ಹಳ್ಳಿಯವರು ಸ್ವತಃ ಕೆರೆಗಳನ್ನು ನಿರ್ಮಾಣ ಮಾಡಿಕೊಂಡಿದ್ದರು. ಆಗ ಕೆರೆಗಳ ರಿಪೇರಿ ಯಾವರೀತಿ ಆಗುತ್ತಿತ್ತು ಎಂದರೆ ಅಲ್ಲಿನ ಮಣ್ಣನ್ನು ರೈತರೇ ಉಪಯೋಗಿಸಿಕೊಂಡು ರಿಪೇರಿ ಮಾಡಿಕೊಳ್ಳುತ್ತಿದ್ದರು. ಈಗ ಅದು ಯಾವುದೂ ಇಲ್ಲ. ಪ್ರತಿಯೊಂದಕ್ಕೂ ಸರ್ಕಾರವನ್ನೇ ನೋಡುತ್ತಿದ್ದಾರೆ ಇಂಜಿನಿಯರಿಂಗ್ ಇಲಾಖೆಯ ಸಿಬ್ಬಂದಿ ಬೃಹದಾಕಾರವಾಗಿ ಬೆಳೆದಿದೆ. ೧೮ ಜನ ಚೀಫ್ ಇಂಜಿನಿಯರ್‌ಗಳಿದ್ದಾರೆ. ಬೇಕಾದಷ್ಟು ಸಿಬ್ಬಂದಿ ಇದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಸಬ್‌ಡಿವಿಜನ್ ಇದೆ. ಆದರೆ ಅಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಇನ್ನೊಂದು ತೊಂದರೆ ಎಂದರೆ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಲೆಟರ್ ಆಫ್ ಕ್ರೆಡಿಟ್ ಇದ್ದಾಗ ನಾವು ಎಸ್ಟಿಮೇಟ್ ಮಾಡಿ ಕಳುಹಿಸಿದರೆ ಅದು ಮಂಜೂರಾಗಿ ಬರುವುದಿಲ್ಲ ಅಥವಾ ಅದು ಮಂಜೂರಾಗಿ ಬರುವುದರೊಳಗೆ ಲೆಟರ್ ಆಫ್ ಕ್ರೆಡಿಟ್ ಲ್ಯಾಪ್ಸ್ ಆಗುತ್ತದೆ. ಹೀಗಾದರೆ ಏನೂ

ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೊನೇಪಕ್ಷ ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟ ರಿಪೇರಿ ವಗೈರೆ ಕೆಲಸಗಳನ್ನು ಮಾಡುವುದಕ್ಕೆ ಲೆಟರ್ ಆಫ್ ಕ್ರೆಡಿಟ್ ಏನಿದೆ ಅದನ್ನು ಲಿಫ್ಟ್ ಮಾಡುವುದಕ್ಕೆ ತಾವು ಒತ್ತಾಯ ಮಾಡಬೇಕು. ಹಾಗೆ ಮಾಡದೇ ಹೋದರೆ ಪ್ರಯೋಜನವಾಗುವುದಿಲ್ಲ. ಬಹು ಮುಖ್ಯವಾಗಿ ಒಂದು ಮಾತು ಹೇಳಬೇಕೆಂದರೆ ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ಹಾಕಿ ಹೆಚ್ಚಿನ ಹಣವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಸ್ನೇಹಿತರಾದ ಮಾನ್ಯ ಪುಟ್ಟಸ್ವಾಮಿಯವರು ತಂದಿರತಕ್ಕಂಥ ಈ ನಿರ್ಣಯವನ್ನು ಎಲ್ಲ ಮಾನ್ಯ ಸದಸ್ಯರೂ ಬೆಂಬಲಿಸುತ್ತಾರೆಂದು ಹೇಳಿ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡದೆ ಪಾಸ್ ಮಾಡಿದರೆ ಸರ್ಕಾರದ ಪ್ರೆಸ್ಟೀಜ್ ಕೂಡ ಜಾಸ್ತಿಯಾಗುತ್ತದೆಂದು ಹೇಳಿ, ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಸ್ವಾಮಿಯವರು ತಂದಿರತಕ್ಕ ನಿರ್ಣಯವನ್ನು ಅನುಮೋದಿಸುತ್ತಾ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಕೆರೆ ರಿಪೇರಿಗಳ ಬಗ್ಗೆ ಮಾತನಾಡುವಾಗ ಕೆರೆಗಳ ಹೂಳನ್ನು ತೆಗೆಸುವುದಕ್ಕೆ ಆಗುವುದಿಲ್ಲವೆಂದು, ಇದು ಎಕನಾಮಿಕ್ ಅಲ್ಲ, ಎಂದು ನಿರ್ಣಯಕ್ಕೆ ಬಂದುಬಿಟ್ಟು ಯಾವಾಗ ಕೇಳಿದರೂ ಕೂಡ ಇದೇ ವಾದವನ್ನು ಮುಂದಿಡುತ್ತೀರಿ. ಇದು ಅಸಾಧುವಾದ ನಿರ್ಣಯವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ವ್ಯವಸಾಯಗಾರರಿಗೆ ಬಹುಮುಖ್ಯವಾಗಿ ನೀರು ಬೇಕು. ಅದು ಮಳೆಯ ನೀರು ಆಗಬಹುದು, ಅಥವಾ ಕೆರೆಯ ನೀರು ಆಗಬಹುದು, ಇಲ್ಲಾ ನದಿಯ ನೀರು ಆಗಬಹುದು. ಕೆಲವು ಭಾಗದಲ್ಲಿ ೪–೫ ಇಂಚು ಮಳೆ ಆಗುತ್ತದೆ. ೨–೩ ತಿಂಗಳು ಮಳೆ ಬರುವುದಿಲ್ಲ. ಅಂಥ ಪ್ರದೇಶದಲ್ಲಿ ರೈತರು ವ್ಯವಸಾಯದಿಂದಲೇ ಜೀವನ ಮಾಡಬೇಕಾಗಿ ಬಂದರೆ ಅತಿವೃಷ್ಟಿ ಕಾಲದಲ್ಲಿ ಬಂದ ಮಳೆಯ ನೀರನ್ನು ಒಂದು ಭಾಗದಲ್ಲಿ ಸ್ಟೋರ್ ಮಾಡಿ ಅನಂತರ ಅದನ್ನು ವ್ಯವಸಾಯಕ್ಕೆ ಉಪಯೋಗಿಸುವುದು ಬಹುಮುಖ್ಯವಾದುದು. ಬಹುಶಃ ಈ ದೃಷ್ಟಿಯಿಂದ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಕೆರೆಗಳನ್ನು ಕಟ್ಟಬೇಕು; ಮತ್ತು ಇರತಕ್ಕ ಕೆರೆಗಳ ರಿಪೇರಿಯನ್ನು ಮಾಡಬೇಕು. ಅಷ್ಟನ್ನು ಮಾಡದೇ ಹೋದರೆ ನೀರು ಸಮುದ್ರದ ಪಾಲಾಗುತ್ತದೆ. ಇತ್ತೀಚೆಗೆ ಕುಡಿಯುವ ನೀರಿಗೆ ಬರ ಬಂದಿದೆ. ಇದಕ್ಕೆ ಕಾರಣ ಏನು ಎಂದರೆ ಯಾವಾಗ ಬಿದ್ದ ಮಳೆಯ ನೀರು ಸ್ಟೋರ್ ಆಗದೇ ಹೋಗುತ್ತದೆ ಆಗ ಭೂಮಿ ಬರಡಾಗುವುದಕ್ಕೆ ಅವಕಾಶವಾಗುತ್ತದೆ.

ಅದಕ್ಕೆ ವಾಟರ್ ಟೇಬಲ್ ಎಂದು ಹೇಳುತ್ತೇವೆ. ಭೂಮಿಯಲ್ಲಿ ಇಳಿದಂಥ ನೀರು ಅಂತರ್ಜಲ ಆಗುತ್ತದೆ. ಇದು ಯಾವಾಗ ಕಡಿಮೆಯಾಯಿತೋ ಆಗ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುತ್ತದೆ. ೫೦ ಅಡಿ, ೧೦೦ ಅಡಿಗೆ ಬೋರ್‌ವೆಲ್ ಹಾಕಿದರೂ ನೀರು ಕಡಿಮೆಯಾಗಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ಈ ದೃಷ್ಟಿಯಿಂದ ಕೆರೆಗಳಲ್ಲಿ ಹೂಳನ್ನು ತೆಗೆದು ರಿಪೇರಿಮಾಡುವುದು ಬಹಳ ಮುಖ್ಯ. ಎರಡನೆಯದು, ಬಹುಶಃ ಒಂದು ಕೆರೆ ಇದ್ದು ನೀರು ಇದ್ದರೆ ಆ ವ್ಯಾಲಿಯಲ್ಲಿ ಇರತಕ್ಕ ತೆಂಗಿನ ತೋಟ, ಅಡಿಕೆ ತೋಟ, ಬಾಳೆ ತೋಟ ಎಲ್ಲವೂ ಹಸಿರಾಗಿರುವುದಕ್ಕೆ ಸಹಾಯವಾಗುತ್ತದೆ. ಸರ್ಕಾರದವರು ಕೆರೆ ಹೂಳು ತೆಗೆಯಕೂಡದು ಎಂದು ಏನು ಪಾಲಿಸಿ ಮಾಡಿದ್ದಾರೋ ಅದನ್ನೇ ಹತ್ತಾರು ವರ್ಷ ಮುಂದುವರೆಸಿದರೆ ಆ ಪ್ರದೇಶ ಎಲ್ಲಾ ಬೆಂಗಾಡಾಗಿ, ಬಾವಿಯಲ್ಲೂ ನೀರು ಬಾರದೇ ತೆಂಗಿನ ತೋಟ, ಅಡಿಕೆ ತೋಟ, ಬಾಳೆ ತೋಟ ಎಲ್ಲಾ ಹಾಳಾಗಿ ಹೋಗುತ್ತದೆ. ಆದುದರಿಂದ ಸರ್ಕಾರ ಕೆರೆಗಳ ಹೂಳನ್ನು ತೆಗೆಯಕೂಡದು ಎಂದು ಏನು ನಿರ್ಣಯ ತೆಗೆದುಕೊಂಡಿದೆ ಅದನ್ನು ತತ್‌ಕ್ಷಣ ಬದಲಾಯಿಸಿ ಒಂದು ಸಮಗ್ರವಾದ ಯೋಜನೆಯನ್ನು ತಯಾರುಮಾಡಿ, ರಾಜ್ಯದ ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಕೆರೆಗಳನ್ನು ರಿಪೇರಿ ಮಾಡಿಸಬೇಕು, ಅಚ್ಚುಕಟ್ಟು ಪ್ರದೇಶದಲ್ಲಿ ನೀರು ಬರಬೇಕಾದರೆ ಮೇಲುಗಡೆ ಆಯಕಟ್ಟಿನ ಪ್ರದೇಶದಲ್ಲಿ ಬಂದಂಥ ನೀರನ್ನು ಸ್ಟೋರ್ ಮಾಡಬೇಕು. ಇದರ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ತಯಾರುಮಾಡಿ ಕಾರ್ಯಗತ ಮಾಡದೇ ಹೋದರೆ ನಾಲ್ಕಾರು ವರ್ಷಗಳೊಳಗೆ ಅದನ್ನು ಆಶ್ರಯಿಸಿರತಕ್ಕ ಪ್ರದೇಶವೆಲ್ಲಾ ಬೆಂಗಾಡು ಆಗುತ್ತದೆ, ಲಕ್ಷಾಂತರ ರೈತರು ತೊಂದರೆಗೆ ಸಿಕ್ಕಿಕೊಳ್ಳುತ್ತಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಚನ್ನಬಸಪ್ಪನವರು ಕೆರೆಗಳ ಹೂಳು ತೆಗೆಯಕೂಡದು, ಎಕಾನಮಿ ಅಲ್ಲ ಎಂದು ಏನು ಪಾಲಿಸಿಯನ್ನು ಹೇಳಿದ್ದಾರೆ, ಅದನ್ನು ಬದಲಾಯಿಸಿ ಹೆಚ್ಚು ಬೆಳೆ ಆಗಬೇಕಾದರೆ, ವ್ಯವಸಾಯ ಲಾಭದಾಯಕವಾಗಬೇಕಾದರೆ ಮತ್ತು ಈ ದೇಶ ಆಹಾರದ ಸ್ವಾವಲಂಬನೆಯಾಗಬೇಕಾದರೆ, ಎಷ್ಟು ದುಡ್ಡು ಖರ್ಚಾದರೂ ಚಿಂತೆ ಇಲ್ಲ, ಸಣ್ಣ ನೀರಾವರಿ ಕೆರೆಗಳನ್ನು ರಿಪೇರಿ ಮಾಡಬೇಕು ಒಂದು ಸಮಗ್ರ ಯೋಜನೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ,

ಹಾಗೇ ಬಾವಿಗಳು ಸುಮಾರು ೨ ೪/೧ ಕೋಟಿ ಎಕರೆ ಪ್ರದೇಶದಲ್ಲಿ ನೀರಾವರಿ ೩೫ ಲಕ್ಷ ಎಕರೆ ಪ್ರದೇಶ ಮಾತ್ರ. ಇನ್ನು ಉಳಿದ ಭಾಗಗಳಲ್ಲಿ ಹೊಸ ಕೆರೆಗಳನ್ನು ನಿರ್ಮಾಣಮಾಡುವುದರ ಜೊತೆಗೆ ಅಂತರ್ಜಲವನ್ನು ಟ್ಯಾಪ್ ಮಾಡಬೇಕಾದ ಅವಶ್ಯಕ ಇದೆ; ಮತ್ತು ನೀರಾವರಿ ಬಾವಿಗಳನ್ನು ತೆಗೆಯುವುದಕ್ಕೆ ಅವಕಾಶ ಇದೆ. ಇದರ ಬಗ್ಗೆ ಸರ್ಕಾರ ಕೊಟ್ಟಿಲ್ಲ. ಈಗಿರತಕ್ಕ ಬಾವಿಗಳನ್ನು ಎರಡು ಪಟ್ಟು ಜಾಸ್ತಿ ಮಾಡುವುದಕ್ಕೆ ಅವಕಾಶ ಇದೆ. ಆದುದರಿಂದ ಇದರ ಬಗ್ಗೆ ಸರ್ಕಾರ ಗಮನಕೊಟ್ಟು ಎಲ್ಲೆಲ್ಲಿ ನೀರಾವರಿ ಬಾವಿಗಳಿಲ್ಲವೋ ಅಂಥ ಕಡೆಗಳಲ್ಲಿ ಬಾವಿಗಳನ್ನು ತೆಗೆದು ಮತ್ತು ತೆಗೆದಿರತಕ್ಕ ಬಾವಿಗಳಿಗೆ ಪಂಪುಸೆಟ್ಟುಗಳನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಿ. ನಾಗರಾಳ್ (ಸಣ್ಣ ನೀರಾವರಿ ಶಾಖೆಯ ರಾಜ್ಯ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಬಿ. ಪುಟ್ಟಸ್ವಾಮಿಯವರು ಸಣ್ಣ ನೀರಾವರಿ ಖಾತೆಗೆ ೧೦ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಒದಗಿಸಬೇಕು ಎನ್ನತಕ್ಕ ನಿರ್ಣಯವನ್ನು ತಂದಿದ್ದರ ಮೇಲೆ ಮಾನ್ಯ ಸದನದ ಸದಸ್ಯರು ಅದನ್ನು ಪುಷ್ಟೀಕರಿಸಿದ್ದಾರೆ. ಇವತ್ತಿನ ದಿವಸ ಸಣ್ಣ ನೀರಾವರಿಗೆ ಅತ್ಯಂತ ವಿಶೇಷವಾಗಿ ತೀವ್ರಗತಿಯಿಂದ ಗಮನಕೊಟ್ಟು ಹೆಚ್ಚು ಹಣವನ್ನು ಒದಗಿಸಬೇಕು ಎನ್ನುವ ದೃಷ್ಟಿಯಿಂದ ಎಲ್ಲರೂ ಪುಷ್ಟಿಕೊಟ್ಟು ಮಾತನಾಡಿದ್ದಾರೆ. ಅಧ್ಯಕ್ಷರೇ, ಸರ್ಕಾರದ ಕಕ್ಷೆಯಲ್ಲಿ ಇರುವುದು ಕೇವಲ ಸಣ್ಣ ನೀರಾವರಿ ಖಾತೆ ಒಂದೇ ಅಲ್ಲ. ಇವತ್ತು ಸರ್ಕಾರಕ್ಕೆ ಇರತಕ್ಕ ಸಂಪನ್ಮೂಲಗಳಿಂದ ಯಾವ ಯಾವ ಖಾತೆಗೆ ಎಷ್ಟೆಷ್ಟು ಹಣವನ್ನು ಒದಗಿಸುವುದು ಫೈನಾನ್ಸ್ ಡಿಪಾರ್ಟ್‌ಮೆಂಟಿನ ಕರ್ತವ್ಯ. ಅದಕ್ಕನುಗುಣವಾಗಿ ನಾವು ನೋಡಬೇಕಾಗಿದೆ. ವಿಶೇಷವಾಗಿ ವಿದ್ಯಾ ಖಾತೆ ಇದೆ ಅದೇರೀತಿ ಆರೋಗ್ಯ ಖಾತೆ ಇದೆ, ಜನರ ಆರೋಗ್ಯ ಪರಿಪಾಲನೆ ಮಾಡುವುದು ಸರ್ಕಾರದ ಆದ್ಯ ಕರ್ತವ್ಯ. ಇದಕ್ಕನುಗುಣವಾಗಿ ವಿದ್ಯಾ ಖಾತೆಗೆ, ಆರೋಗ್ಯ ಖಾತೆಗೆ ಯಾವ ರೀತಿಯಿಂದ ಹಣವನ್ನು ಒದಗಿಸಬೇಕು ಎನ್ನುವುದನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಹಣವನ್ನು ಒದಗಿಸಬೇಕಾಗಿರತಕ್ಕಂಥಾದ್ದು ಫೈನಾನ್ಸ್ ಡಿಪಾರ್ಟ್‌ಮೆಂಟಿನ ಆದ್ಯ ಕರ್ತವ್ಯ ವೆನ್ನುವುದನ್ನು ಮರೆಯಬಾರದು. ಇವತ್ತು ನಮಗೆ ದೊರಕತಕ್ಕ ಹಣ ಎಂದರೆ, ೧೯೭೩-೭೪ನೇ ಸಾಲಿನಲ್ಲಿ ೭ ಕೋಟಿ ೨೩ ಲಕ್ಷ, ೧೯೭೪-೭೫ನೇ ಸಾಲಿನಲ್ಲಿ ೧೧ ಕೋಟಿ ೧೦ ಲಕ್ಷ, ೧೯೭೫-೭೬ನೇ ಸಾಲಿನಲ್ಲಿ ೧೨ ಕೋಟಿ ೪೦ ಲಕ್ಷ ಒದಗಿಸಿದ್ದಾರೆ. ೧೯೭೪-೭೫ನೇ ಸಾಲಿನಲ್ಲಿ ಒದಗಿಸಿರತಕ್ಕ ೧೧ ಕೋಟಿ ೧೦ ಲಕ್ಷದಲ್ಲಿ ಸರ್ವೆ ಸಾಧಾರಣವಾಗಿ ೭೦೦ ಕೆಲಸಗಳನ್ನು ೪-೪ ೧/೨ ಕೋಟಿ ಖರ್ಚು ಮಾಡಿ ಮುಗಿಸಿದ್ದಾಗಿದೆ. ಮತ್ತು ರಿಪೇರಿ ಕೆಲಸಗಳಿಗೆ ೩-೩ ೧/೨ ಕೋಟಿ ವಿನಿಯೋಗಿಸಲಾಗಿದೆ. ಪ್ಲಾನಿನಲ್ಲಿ ೭ ಕೋಟಿ ೧೫ ಲಕ್ಷ. ನಾನ್ ಪ್ಲಾನಿನಲ್ಲಿ ೫ ಕೋಟಿ ೨೯ ಲಕ್ಷ ಒದಗಿಸಿದ್ದಾಗಿದೆ ಅದರಲ್ಲಿ ಸಾಯಿಲ್ ಕನ್‌ಸರ್ವೇಷನ್ ಬರುತ್ತದೆ. ಎಸ್ಟಾಬ್ಲಿಷ ಮೆಂಟ್ ಎಕ್ಸ್‌ಪೆಂಡಿಚರ್ ಬರುತ್ತದೆ, ನಾನ್ ಪ್ಲಾನ್‌ನಲ್ಲಿ ಸ್ಪಿಲ್ ಓವರ್ ವರ್ಕ್ಸ್‌ಗೆ ೪ ಕೋಟಿ ೬೦ ಲಕ್ಷ ಖರ್ಚು ಮಾಡುವುದಕ್ಕೆ ಅನುವುಮಾಡಲಾಗಿದೆ. ನಾನಾ ಪ್ಲಾನ್‌ನಲ್ಲಿ ವಿಶೇಷವಾಗಿ ಕೆರೆ ರಿಪೇರಿ, ಕೆನಾಲ್ ರಿಪೇರಿ ಬರುತ್ತದೆ. ಇದನ್ನು ಕಾರ್ಯಗತಗೊಳಿಸಲಿಕ್ಕೆ ೩ ೧/೨ ಕೋಟಿ ಒದಗಿಸಿದ್ದಾರೆ. ಹೋದ ಸಲ ಕೆನಾಲ್ ರಿಪೇರಿ ಮಾಡಿಸಬೇಕು ಎಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದರಿಂದ. ಕೆನಾಲ್ ರಿಪೇರಿ ದೆಸೆಯಿಂದ ೩-೪ ಕೋಟಿ ರೂಪಾಯಿಗಳನ್ನು ಒದಗಿಸಿದರೆ ಅನುಕೂಲವಾಗುತ್ತದೆ ಎಂದು ನಾನು ಅರ್ಥಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಂಡಿದ್ದರ ಮೇಲೆ ಅವರು ಕೆನಾಲ್ ರಿಪೇರಿ, ಕೆರೆ ರಿಪೇರಿಗೋಸ್ಕರ ೧ ಕೋಟಿ ಸ್ಪೆಷಲ್ ಗ್ರಾಂಟನ್ನು ಕೊಟ್ಟಿದ್ದಾರೆ. ಇದನ್ನು ನೋಡಿದಾಗ ನಾನ್ ಪ್ಲಾನ್‌ನಲ್ಲಿ ೪ ಕೋಟಿ ೬೨ ಲಕ್ಷ ಮತ್ತು ೩ ೧/೨ ಕೋಟಿ ಹಾಗೂ ೧ ಕೋಟಿ ಸ್ಪೆಷಲ್ ಗ್ರಾಂಟ್ ಸೇರಿ ಕಡೆಗೆ ನಮಗೆ ೯ ಕೋಟಿ ೪ ಲಕ್ಷ ರೂಪಾಯಿಗಳನ್ನು ಒದಗಿಸಿದ ಹಾಗೆ ಆಗುತ್ತದೆ. ಸ್ಪಿಲ್ ಓವರ್ ವರ್ಕ್ಸ್ ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬಂದು, ಪೂರ್ತಿ ಮುಗಿಸಬೇಕಾದರೆ ಸಣ್ಣ ನೀರಾವರಿ ಖಾತೆಗೆ ೩೫ ರಿಂದ ೪೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು, ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮಲ್ಲಿರುವ ೯೦೦, ೧೦೦೦ ಸ್ಪಿಲ್ ಓವರ್ ಕೆಲಸಗಳು ಪೂರ್ತಿ ಮುಗಿದು, ಇದೇ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ವರ್ಷಕ್ಕೆ ೩೦೦, ೪೦೦ ಕೆಲಸಗಳನ್ನು ಹೊಸದಾಗಿ ತೆಗೆದುಕೊಂಡರೂ ೧೧ ನೂರು ಕೆಲಸಗಳು ಮುಂದಿನ ಪಂಚವಾರ್ಷಿಕ ಯೋಜನೆಗೆ ತಳ್ಳಲಾಗತಕ್ಕ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕೆ ಅನುಗುಣವಾಗಿ ಸರ್ವೆ ಸಾಧಾರಣವಾಗಿ ೧೯೭೫-೭೬ ರಲ್ಲಿ ೩೭೫ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಮುಂದಿನ ವರ್ಷ ಯಾವ ಯಾವವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯದೊಂದಿಗೆ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೊಡಬೇಕು ಎನ್ನುವ ದೃಷ್ಟಿಯಿಂದ ಒಂದು ಮೀಟಿಂಗ್ ಮಾಡಿ ಅವರವರ ಅಭಿಪ್ರಾಯವನ್ನು ತೆಗೆದುಕೊಂಡು ಪ್ರಿಯಾರಿಟಿ ಮೇಲೆ ಯಾವ ಕೆರೆ ಕೆಲಸ, ಲಿಫ್ಟ್ ಇರಿಗೇಷನ್ ಕೆಲಸ ಕೊಡಬೇಕು ಎನ್ನುವ ದೃಷ್ಟಿಯಿಂದ ಒಂದು ಯೋಜನೆ ಹಾಕಿಕೊಂಡಿದ್ದಾಗಿದೆ. ಆದುದರಿಂದ ಆಯಾ ತಾಲ್ಲೂಕಿನ ಸದಸ್ಯರನ್ನು ಕರೆದು ಅವರವರ ಅಭಿಪ್ರಾಯದೊಂದಿಗೆ ಪ್ರಿಯಾರಿಟಿ ಮೇಲೆ ಯಾವ ಕೆಲಸಗಳನ್ನು ಕೊಡಬೇಕೋ ಅವುಗಳನ್ನು ಕೊಡುವುದರಲ್ಲಿ ಸರ್ಕಾರ ಹಿಂದುಮುಂದೆ ನೋಡುವುದಿಲ್ಲ ಎಂದು

ಇವತ್ತು ಸ್ಪಷ್ಟಪಡಿಸುತ್ತಿದ್ದೇನೆ. ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮಲೆನಾಡಿನ ಬಗ್ಗೆ ವಿಶೇಷವಾಗಿ ಮಾತನಾಡಿ, ಅದರಲ್ಲಿರತಕ್ಕ ಕೆರೆಗಳಲ್ಲಿ ಹೂಳು ತೆಗೆಸಬೇಕು ಎಂದು ಮುಂತಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ತಂತ್ರಜ್ಞರಿಂದ ಕೆರೆಗಳಲ್ಲಿ ಹೂಳು ತೆಗೆಸುವುದು ಅಷ್ಟು ಸಮಂಜಸವಾಗುವುದಿಲ್ಲ, ವಿಶೇಷವಾಗಿ ಖರ್ಚು ಬರುತ್ತದೆ, ಹೂಳು ತೆಗೆಸುವುದಕ್ಕಿಂತ ಹೊಸ ಕೆರೆ ಕೊಡುವುದು ಸೂಕ್ತ ಎನ್ನುವ ಅಭಿಪ್ರಾಯ ಬಂದಿದೆ. ಆದುದರಿಂದ ಮುಂದೆ ಹೊಸ ಕೆರೆಗಳನ್ನು ನಿರ್ಮಾಣ ಮಾಡುವಾಗ ಹೊಸ ಸೈಟು ತೆಗೆದುಕೊಂಡು ಕೆರೆಯನ್ನು ನಿರ್ಮಾಣ ಮಾಡಬೇಕಾಗುತ್ತದೆ ಒಂದು ವೇಳೆ ಹೊಸ ಸೈಟು ಇರಲಾರದ ಎನ್ನುವ ಪ್ರಸಂಗ ಬಂದಾಗ, ಇರುವ ಕೆರೆಯಲ್ಲಿ ಸರಿಯಾಗಿ ಹೂಳು ತೆಗೆಸುವ ದೃಷ್ಟಿಯಿಂದ ತಾಂತ್ರಿಕ ತಜ್ಞರ ಸಹಾಯ ತೆಗೆದುಕೊಂಡು ಅದರ ಫೀಸಿಬಿಲಿಟಿ ನೋಡಿಕೊಂಡು ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಕೆರೆಗಳ ಹೂಳು ತೆಗೆಸುವುದೇ ಕಷ್ಟವಾಗಿದೆ ಇನ್ನು ಹೊಸ ಹೊಸ ಕೆರೆಗಳನ್ನು ಕಟ್ಟಿಸುವುದು ಎಲ್ಲಿಂದ ಬರುತ್ತದೆ ?

ಶ್ರೀ ಎಸ್. ಬಿ. ನಾಗರಾಳ.—ಇವೊತ್ತು ಕೆಲವು ಕೆರೆಗಳ ಹೂಳು ತೆಗೆಸುವುದು ಇದೆ. ಇವೊತ್ತು ಒಂದು ಕೆರೆಯ ಹೂಳು ತೆಗೆಸಬೇಕಾದರೆ, ರೈತರ ಒಂದು ಸಲಹೆ ತೆಗೆದುಕೊಂಡು ಸರ್ಕಾರದವರು ವಿಶೇಷವಾಗಿ ಎಷ್ಟು ಖರ್ಚು ಮಾಡಬೇಕು ಎನ್ನುವುದನ್ನು ತಾಂತ್ರಿಕ ತಜ್ಞರಿಂದ ಸಲಹೆ ಪಡೆದು ಹೂಳು ತೆಗೆಸುವ ಏರ್ಪಾಡು ಮಾಡಬೇಕಾಗುತ್ತದೆ. ಈಗಾಗಲೇ ಯಾವರೀತಿ ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ಯಾವ ನಿರ್ಣಯ ತೆಗೆದುಕೊಂಡಿಲ್ಲ. ಈ ರೀತಿ ಹೂಳು ತೆಗೆಸಬೇಕಾದರೆ ಮಾನ್ಯ ಸದಸ್ಯರ ಅಭಿಪ್ರಾಯ ತೆಗೆದುಕೊಂಡು, ಎಲ್ಲಾ ಅಚ್ಚುಕಟ್ಟುದಾರರ ಸಹಾಯ ತೆಗೆದುಕೊಂಡು ನಂತರ ತಜ್ಞರಿಂದ ಪರಿಶೀಲಿಸಿ ಯಾವ ರೀತಿ ಹೂಳು ತೆಗೆಸಬೇಕು ಎನ್ನುವುದನ್ನು ನೋಡಿ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಕೆಲಸಗಳು ಎಷ್ಟು ಕಾಲಾವಧಿಯೊಳಗೆ ಮುಗಿಯುತ್ತವೆ.

ಶ್ರೀ ಎಸ್. ಬಿ. ನಾಗರಾಳ.—ಈಗ ಇದರಲ್ಲಿ ಒಂದು ಸೀಲಿಂಗ್ ಲಿಮಿಟ್ ಇದೆ. ಆದುದರಿಂದ ಪ್ರತಿಯೊಬ್ಬ ಅಚ್ಚುಕಟ್ಟುದಾರರು ಒಂದೊಂದು ಎಕರೆಗೆ ಮೂರು ನಾಲ್ಕು ಸಾವಿರ ರೂಪಾಯಿ ಕೊಡುತ್ತೇವೆ ಎಂದು ಮುಂದೆ ಬಂದರೆ ಅಂತಹ ಕಡೆಗಳಲ್ಲಿ ಈ ಕೆರೆಗಳನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡಬಹುದು. ಅಲ್ಲದೇ ಇದನ್ನು ಎಷ್ಟುಮಟ್ಟಿಗೆ ಕಾರ್ಯಗತ ಮಾಡಬೇಕು ಎನ್ನುವ ಬಗ್ಗೆ ಮಾನ್ಯ ಸದಸ್ಯರೊಂದಿಗೆ ಸಲಹೆ ಪಡೆದು, ನಂತರ ತಾಂತ್ರಿಕ ತಜ್ಞರ ಸಲಹೆ ಪಡೆದು ಮಾಡಬೇಕಾಗುತ್ತದೆ. ನಂತರ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಅವರು ಸ್ವಲ್ಪ ಫಂಡ್ ಪ್ರೊವೈಡ್ ಮಾಡಿದರೆ ಈ ಯೋಜನೆಗಳನ್ನು ಬೇಗ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಅಲ್ಲದೆ ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ಉತ್ತಮವಾದಂಥ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಕೂಡ ಈ ಸಣ್ಣ ನೀರಾವರಿ ಯೋಜನೆಯಲ್ಲಿ ಕಾರ್ಯರೂಪಕ್ಕೆ ತರಬೇಕು ಎನ್ನುವ ಬಗ್ಗೆ ಆಲೋಚನೆ ಮಾಡಿ ಮಾಡಬೇಕಾಗುತ್ತದೆ. ಇವೊತ್ತಿನ ದಿವಸ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಒಂದು ಸೆಮಿನಾರ್ ಮಾಡಿಕೊಂಡು, ಆ ಪ್ರದೇಶಗಳಲ್ಲಿ ಅಭಿವೃದ್ಧಿ ಮಾಡಿದ್ದಾರೆಯೋ ಇಲ್ಲವೇ ಎನ್ನುವ ಬಗ್ಗೆ ಅಲ್ಲಿರತಕ್ಕ ಮಾನ್ಯ ಸದಸ್ಯರು ಹಾಗೂ ತಾಲ್ಲೂಕು ಬೋರ್ಡ್ ಅಧ್ಯಕ್ಷರನ್ನು ಕೇಳಿಕೊಂಡು ಸರಿಯಾದ ದೃಷ್ಟಿಯಿಂದ ಹಣ ವಿನಿಯೋಗವಾಗಿದೆಯೋ ಎನ್ನುವುದನ್ನು ತಿಳಿಯಬೇಕಾದ್ದು ಇದೆ. ಈಗ ಮಾನ್ಯ ಕೆ. ಎಂ. ರುದ್ರಪ್ಪನವರು ಕೊಟ್ಟಿರತಕ್ಕ ದುಡ್ಡು ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿಲ್ಲ ಎಂದು ಹೇಳಿದ್ದಾರೆ. ಮತ್ತೆ ಯಾವ ಯಾವ ಮೇಜರ್ ಇರಿಗೇಷನ್ ಒಳಗಡೆ ಕೊಟ್ಟಿರತಕ್ಕ ೧ ಕೋಟಿ ರೂಪಾಯಿ ಮೇಜರ್ಸ್ ರಿಪೇರ್ಸ್ ಎಂದು ತೆಗೆದುಕೊಂಡು ಸಣ್ಣ ನೀರಾವರಿ ಪ್ರಾರಂಭ ಮಾಡುತ್ತೇನೆ ಎಂದು ಹೇಳಿ ಈ ಸಂದರ್ಭದಲ್ಲಿ ತಂದಿರತಕ್ಕ ನಿರ್ಣಯವನ್ನು ಸನ್ಮಾನ್ಯ ಸದಸ್ಯರು ಫರ್ತ್ ತೆಗೆದುಕೊಳ್ಳಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಜಿ. ಪುಟ್ಟಸ್ವಾಮಿ.—ಅಧ್ಯಕ್ಷರೆ, ಇವೊತ್ತು ಮಾನ್ಯ ಸಚಿವರು ೩೫ ರಿಂದ ೪೦ ಕೋಟಿ ರೂಪಾಯಿ ಈ ಸಣ್ಣ ನೀರಾವರಿ ಕಾಮಗಾಮಗಾರಿಗೆ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಈಗ ೧೯೭೪-೭೫ ರಲ್ಲಿ ಎಷ್ಟು ಹಣ ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿದ್ದರು ಅಷ್ಟು ಖರ್ಚಾಗಿದೆ ಎಂದು ಹೇಳುತ್ತಿದ್ದಾರೆ ಅದು ಕನ್ನಡಿಯಲ್ಲಿ ಇಟ್ಟಿದ್ದು ಗಂಟು ಎಂದು ಹೇಳಬೇಕಾಗಿದೆ ಅಷ್ಟು ದುಡ್ಡು ಖರ್ಚಾಗಿಲ್ಲ.

ಶ್ರೀ ಎಸ್. ಬಿ. ನಾಗರಾಳ.—ಮಾನ್ಯ ಸದಸ್ಯರು ಅಷ್ಟು ಹಣ ಖರ್ಚಾಗಿಲ್ಲ ಎಂದು ಶಂಕೆ ವ್ಯಕ್ತಪಡಿಸುತ್ತಾ ಇರುವುದನ್ನು ನಾನು ಒಪ್ಪುವುದಿಲ್ಲ. ಅವರು ನಮ್ಮ ಆಫೀಸಿಗೆ ಬರಿದರೆ ಅಂಕಿ ಅಂಶಗಳ ಮೇಲೆ ವಿವರ ಕೊಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ —ಈಗ ೩೫–೪೦ ಕೋಟಿ ರೂಪಾಯಿ ಹಣ ಬೇಕಾಗಿರುವುದರಿಂದ ಒಂದು ಪ್ಲಾನ್ ಮಾಡಿ ಸಮಗ್ರವಾಗಿ ಇಷ್ಟು ವರ್ಷಗಳಲ್ಲಿ ಒಂದು ಸಣ್ಣ ನೀರಾವರಿ ಆಗಬೇಕು, ಅವೆಲ್ಲವನ್ನೂ ಪೂರೈಸುವುದಕ್ಕೆ ಇಷ್ಟು ವರ್ಷ ಆಗುತ್ತದೆ ಎನ್ನುವ ವಿವರಣೆ ಕೊಟ್ಟಿಲ್ಲ.

ಶ್ರೀ ಎಸ್. ಬಿ. ನಾಗರಾಳ್.—ಈ ಕೆಲಸ ಮಾಡುವ ದೆಸೆಯಿಂದ ಪಂಚವಾರ್ಷಿಕ ಯೋಜನೆಯಲ್ಲಿ ೩೦ ರಿಂದ ೪೦ ಕೋಟಿ ರೂಪಾಯಿವರೆಗೆ ಬೇಕಾಗುತ್ತದೆ ಎಂದು ಹೇಳಿದ್ದಾರೆ. ವರ್ಷಕ್ಕೆ ೧೦ ಕೋಟಿ ರೂಪಾಯಿಯಂತೆ ಕೊಟ್ಟರೂ ಕೂಡ ಕೆಲವು ಕೆಲಸಗಳು ಹಾಗೆ ಉಳಿಯುತ್ತವೆ, ಅವು ಮುಗಿಯುವುದಿಲ್ಲ. ಆ ಕೆಲಸಗಳು ಮುಂದಿನ ಪಂಚವಾರ್ಷಿಕ ಯೋಜನೆಗಳಲ್ಲಿ ಬರುತ್ತವೆ. ಈಗ ನಮ್ಮ ಮಾನ್ಯ ಪಾಟೀಲರು ಅವರ ಪ್ರದೇಶದ ಒಂದು ನೀರಿನ ಜೌಗು ಪ್ರದೇಶವನ್ನು ತಿಳಿಸಿದರು. ನಾನು ಗುಲ್ಬರ್ಗದಿಂದ ಬರುವಾಗ ಅದನ್ನು ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಏನಾದರೂ ಒಂದು ನೂರು ಎಕರೆಗೆ ನೀರು ಸಿಕ್ಕುವುದಾದರೆ ಅಲ್ಲಿಯ ರಿಪೋರ್ಟ್ ತರಿಸಿಕೊಂಡು ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ, ನಂತರ ಇದನ್ನು ನೆನಪಿಗೆ ತಂದದ್ದಕ್ಕೆ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—Is it the pleasure of the House that leave granted to the member to withdraw the resolution ?

SOME HON. MEMBERS.—No, No.

MR. DEPUTY SPEAKER.—I will put the Resolution to the vote of the House.

The question is.—

> "This Assembly recommends to Government to provide Rs. 10 crores for Minor Irrigation Work in the budget for the year 1975-76".

The Resolution was Nogaiived

(ii) Re: Constitution of an export Committee for studing and fixing reasonable rates for supply of drinking and domestic use of water in Bangalore.

SRI T. R. SHAMANNA (Fort).—Sir, I move :

"That this Assembly recommends to Government to constitute an Export Committtee to study and fix up reasonable rates for the supply of drinking and domestic use of water in Bangalore City".

MR. DEPUTY SPEAKER.—Resolution moved :

"That this Assembly recommends to Government to constitute an expert Committee to study and fix up reasonable rates for the supply of drinking and domestic use of water in Bangalore City".

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ) — ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರಕ್ಕೆ ಅತಿ ಮುಖ್ಯವಾದಂಥ ಈ ನಿರ್ಣಯ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಮೊದಲು ವಂದಿಸುತ್ತೇನೆ. ಅಲ್ಲದೇ ಈ ಬೆಂಗಳೂರು ನಗರಕ್ಕೆ ಕಾವೇರಿ ನೀರು ಬರುವುದಕ್ಕೆ ಸಹಾಯ ಕರ್ತ ದಂಥ ಹಿಂದಿನ ಸರ್ಕಾರವನ್ನು ಈಗಿನ ಸರ್ಕಾರವನ್ನು ಕೂಡ ವಂದಿಸಬೇಕಾಗಿದೆ. ಇವೊತ್ತಿನ ದಿವಸ ಕಾವೇರಿ ನೀರು ಬೆಂಗಳೂರು ನಗರಕ್ಕೆ ಬರದೇ ಹೋಗಿದ್ದರೆ ಬಹಳ ತೊಂದರೆ ಅನುಭವಿಸಬೇಕಾಗಿ ಬರುತ್ತಿತ್ತು. ಈ ಬೆಂಗಳೂರು ನಗರದಲ್ಲಿ ದಿನೇ ದಿನೇ ಹೆಚ್ಚು ಹೆಚ್ಚಾಗಿ ಬೆಳೆಯುತ್ತಾ ಇರತಕ್ಕ